
ಜನಪದ

ವೃತ್ತಿ ಗಾಯಕರು

ಡಾ॥ ಚಕ್ಕೆರೆ ಶಿವಶಂಕರ್



ಜಾನಪದ ಪುಸ್ತಕ ಮಾಲೆ - ೧೪

ಜನಪದ ವೃತ್ತಿ ಗಾಯಕರು

ಡಾ|| ಚಕ್ಕೆರೆ ಶಿವಶಂಕರ್

ಕರ್ನಾಟಕ ಜಾನಪದ ಪರಿಷತ್ತು
ನಂ. ೧, ಜಲದರ್ಶಿನಿ ಬಡಾವಣೆ
ಎಂ. ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ
ನ್ಯೂ ಬಿ.ಇ.ಎಲ್. ರಸ್ತೆ, ಬೆಂಗಳೂರು-೫೬೦ ೦೫೪

JANAPADA VRITTI GAYAKARU - By **Dr. Chakkere Shivashankar,** Pulished by **Karnataka Janapada Parishath,** No. 1, Jaladarshini Layout, Near M. S. Ramaiah Hospital Gate, New BEL Road, Bangalore-560 054,
Phone : 080-23605033. Janapada Loka : 7201143 / 7271555.

ಪ್ರಥಮ ಮುದ್ರಣ : ೨೦೦೮ ಪುಟಗಳು : ೩೨

ಬೆಲೆ : **ರೂ. ೧೦** (ಹತ್ತು ರೂಪಾಯಿಗಳು)

ಮುದ್ರಕರು :
ಚಂದನ ಪ್ರಿಂಟರ್ಸ್
ನಂ. ೫೭, ವಿನಾಯಕ ಕಾಂಪ್ಲೆಕ್ಸ್
೮೦ ಅಡಿ ರಸ್ತೆ, ೯ನೇ ಮೇನ್, ಶ್ರೀನಿವಾಸನಗರ
ಬ್ಯಾಂಕ್ ಕಾಲೋನಿ, ಬೆಂಗಳೂರು-೫೬೦ ೦೫೦

ಅಧ್ಯಕ್ಷರ ಮಾತು

ಕರ್ನಾಟಕ ಜಾನಪದ ಪರಿಷತ್ತಿನ ಹಲವು ಯೋಜನೆಗಳಲ್ಲಿ ಜಾನಪದ ಪುಸ್ತಕ ಪ್ರಕಟಣೆ ಒಂದು. ಇದರಲ್ಲಿ ವಿದ್ವತ್ ಗ್ರಂಥಗಳ ಪ್ರಕಟಣೆಗಳೇ ಹೆಚ್ಚು. ಇವುಗಳ ಜೊತೆಗೆ ಜಾನಪದ ಜನಪ್ರಿಯ ಪುಸ್ತಕ ಮಾಲೆಯನ್ನು ಪ್ರಾರಂಭಿಸಿದೆ. ಜಾನಪದವನ್ನು ಜನಸಾಮಾನ್ಯರಿಗೆ ತಲುಪಿಸುವುದು ಇದರ ಮುಖ್ಯ ಉದ್ದೇಶ. ಇದರಲ್ಲಿ ಜಾನಪದಕ್ಕೆ ದುಡಿದಿರುವ, ದುಡಿಯುತ್ತಿರುವ ಕಲಾವಿದರು, ಕಲೆಗಳು, ಸಂಗ್ರಾಹಕರು, ವಿದ್ವಾಂಸರು, ಸ್ವಾರಸ್ಯಕರವಾದ ಉಪಯುಕ್ತವಾದ ಜನಪದ ಗೀತ ಸಾಹಿತ್ಯದ ಸೋದಾಹರಣ ವ್ಯಾಖ್ಯಾನ–ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ, ನಾಡಿನ ಪ್ರಸಿದ್ಧ ಸಾಹಿತಿ ಸಂಶೋಧಕರಿಂದ ಕಿರುಗ್ರಂಥಗಳನ್ನು ಬರೆಯಿಸಿ, ಪ್ರಕಟಿಸಿ, ಕೇವಲ ಹತ್ತು ರೂಪಾಯಿ ಬೆಲೆಗೆ ಒದಗಿಸಲು ಯೋಜಿಸಿದೆ. ಕಡಿಮೆ ಅವಧಿಯಲ್ಲಿ ಓದಿಕೊಳ್ಳಬಹುದಾದ ಈ ಗ್ರಂಥಗಳು ಹಲವು ಮಾಹಿತಿಗಳನ್ನು ಸಂಕ್ಷಿಪ್ತವಾಗಿ ತಿಳಿಯಪಡಿಸುತ್ತವೆ.

ಈ ಜನಪ್ರಿಯ ಪುಸ್ತಕ ಮಾಲೆಗೆ ಡಾ. ಚಕ್ಕೆರೆ ಶಿವಶಂಕರ್ ಅವರು **'ಜನಪದ ವೃತ್ತಿ ಗಾಯಕರು'** ಎಂಬ ಕಿರುಹೊತ್ತಿಗೆಯನ್ನು ಬರೆದುಕೊಟ್ಟಿದ್ದಾರೆ. ಲೇಖಕರಿಗೂ ಗ್ರಂಥ ಪ್ರಕಟನಾ ಸಮಿತಿಯ ಸದಸ್ಯರಿಗೂ ಕೃತಜ್ಞತೆಗಳನ್ನು ಅರ್ಪಿಸಿ, ಸಹೃದಯರು ಈ ಪುಸ್ತಕವನ್ನು ಸ್ವಾಗತಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಜಿ. ನಾರಾಯಣ
ಅಧ್ಯಕ್ಷರು
ಕರ್ನಾಟಕ ಜಾನಪದ ಪರಿಷತ್ತು

ಲೇಖಕರ ಮಾತು

ಜನರಿಂದ, ಜನರಿಗಾಗಿ, ಜನರಿಗೋಸ್ಕರ ಹುಟ್ಟಿಕೊಂಡ ಜನಪದ ಕಲೆಗಳು ಜನಪದದ ಕಲಾತ್ಮಕ ಅಭಿವ್ಯಕ್ತಿ. ವರ್ಣರಂಜಿತ ವೇಷಭೂಷಣ, ಸುಮಧುರ ವಾದ್ಯಮೇಳ, ಸಂಭಾಷಣೆ, ಹಾಡುಗಾರಿಕೆ, ಕುಣಿತ, ಅಭಿನಯ ಮೊದಲಾದ ಅಂಶಗಳನ್ನು ತನ್ನಲ್ಲಿ ಅಂತರ್ಗತಿಸಿಕೊಂಡಿರುವ ಜನಪದ ಕಲೆಗಳು ಸಮುದಾಯದ ಬದುಕಿನ ಮೌಲ್ಯಗಳನ್ನು ಒಳಗೊಂಡಿರುವ ಸಂಸ್ಕೃತಿಯ ಕುರುಹುಗಳು ಎಂದರೆ ತಪ್ಪಲ್ಲ.

ಕರ್ನಾಟಕದಲ್ಲಿ ಸುಮಾರು ೨೦೦ ಕ್ಕೂ ಹೆಚ್ಚು ಜನಪದ ಕಲೆಗಳು ಪ್ರಚಲಿತದಲ್ಲಿವೆ. ಇವುಗಳಲ್ಲಿ ಕೆಲವು ಪ್ರಕಾರಗಳಂತೂ ಸಾರ್ವತ್ರಿಕ ಜನಪ್ರಿಯತೆಯನ್ನು ಪಡೆದುಕೊಂಡಿವೆ. ಹಲವು ಪ್ರಕಾರಗಳು ಆಯಾ ಪ್ರದೇಶಕ್ಕೆ ಮಾತ್ರವೇ ಸೀಮಿತವಾಗಿ ಉಳಿದುಕೊಂಡು ಬಂದಿವೆ. ಇಂತಹ ಪ್ರಾದೇಶಿಕ ಜನಪದ ಕಲೆಗಳಲ್ಲಿ ಕೆಲವನ್ನು ಆಯ್ದು ಈ ಕಿರುಹೊತ್ತಿಗೆಯಲ್ಲಿ ಬಣ್ಣದ ಛಾಯಾಚಿತ್ರಗಳೊಂದಿಗೆ ಪರಿಚಯಿಸಲಾಗಿದೆ. ಆದ್ದರಿಂದ ಆಯಾ ಭಾಗದ ಕಲೆಗಳು ಎಂದಾಗ ಇದು ಸಮಗ್ರವಲ್ಲ. ಕೇವಲ ಪ್ರಾತಿನಿಧಿಕ ಕಲೆಗಳ ಪರಿಚಯವಷ್ಟೆ.

ಕರ್ನಾಟಕ ಜಾನಪದ ಪರಿಷತ್ತು ಜನಪ್ರಿಯ ಜಾನಪದ ಪುಸ್ತಕ ಮಾಲೆಯಲ್ಲಿ ಜಾನಪದದ ವಿವಿಧ ಸಂಗತಿಗಳನ್ನು ಕುರಿತು ಪರಿಚಯಿಸುವ ಸಲುವಾಗಿ ಕಿರುಹೊತ್ತಿಗೆಗಳನ್ನು ಪ್ರಕಟಿಸುತ್ತಿರುವುದು ಪ್ರಶಂಸಾರ್ಹ. ಇಂತಹ ಕಿರುಹೊತ್ತಿಗೆಗಳು ಮಕ್ಕಳಿಂದ ಮೊದಲುಗೊಂಡು ನವ ಸಾಕ್ಷರರವರೆಗೂ ಅರಿವು ಮೂಡಿಸುತ್ತವೆ ಎಂಬುದರಲ್ಲಿ ಸಂದೇಹವಿಲ್ಲ. ಈ ಕಿರುಹೊತ್ತಿಗೆಗಳ ಪ್ರಕಟಣೆಗೆ ಕಾರಣರಾದ ಕರ್ನಾಟಕ ಜಾನಪದ ಪರಿಷತ್ತಿನ ಎಲ್ಲಾ ಪದಾಧಿಕಾರಿಗಳು ಮತ್ತು ಗ್ರಂಥ ಪ್ರಕಟಣಾ ಸಮಿತಿ ಸದಸ್ಯರುಗಳಿಗೆ ಹೃತ್ಪೂರ್ವಕ ಧನ್ಯವಾದಗಳು.

ಡಾ. ಚಕ್ಕೆರೆ ಶಿವಶಂಕರ್

ಕರಪಾಲ ಮೇಳ

ಕರಪಾಲ ಮೇಳವು ಕರ್ನಾಟಕದ ಉತ್ಕೃಷ್ಟ ವೃತ್ತಿಗಾಯಕ ಪರಂಪರೆಗೆ ಸೇರಿರುತ್ತದೆ. ಬೆಂಗಳೂರು ಗ್ರಾಮಾಂತರ, ತುಮಕೂರು, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಕಂಡುಬರುವ ಕರಪಾಲ ಮೇಳವು ಜನಪದ ರಂಗಭೂಮಿಯ ಬೀಜರೂಪ. ಕರಪಾಲದಲ್ಲಿ ಸಾಹಿತ್ಯ, ಸಂಗೀತ, ನೃತ್ಯ, ಅಭಿನಯ, ವೇಷಭೂಷಣ, ವಾದ್ಯಮೇಳ ಎಲ್ಲವೂ ಇದೆ. ಕರಪಾಲ ಮೇಳವನ್ನು ಪ್ರದರ್ಶಿಸಲು ವಿಶೇಷವಾದ



ರಂಗಮಂದಿರವೂ ಸಹ ಬೇಕಿಲ್ಲ. ಊರ ಮುಂದಿನ ಬಯಲು, ಚಾವಡಿ, ಅರಳಿಕಟ್ಟೆ, ದೇವಸ್ಥಾನದ ಪ್ರಾಂಗಣವಾದರೂ ಸಾಕು.

ಕರಪಾಲ ಮೇಳ ಹೆಚ್ಚಾಗಿ ವೀರಶೈವ ಸಮುದಾಯದಲ್ಲಿ ಗೋಚರಿಸುತ್ತದೆ. ಜಂಗಮರು ಕರಪಾಲದಲ್ಲಿ ಪಾಲ್ಗೊಳ್ಳುತ್ತಾರೆ.

ಇವರನ್ನು ಕರಪಾಲದಯ್ಯಗಳು ಎಂದು ಕರೆಯುತ್ತಾರೆ. ಸಾಮಾನ್ಯವಾಗಿ ಕರಪಾಳ ಮೇಳದಲ್ಲಿ ಐದು ಮಂದಿ ಕಲಾವಿದರಿರುತ್ತಾರೆ. ಒಬ್ಬ ಮುಖ್ಯ ಕಥೆಗಾರ. ಇವನೇ ಗುರು. ಇಬ್ಬರು ಸಹಾಯಕರು. ಉಳಿದಿಬ್ಬರು ಹಿಮ್ಮೇಳದವರು. ತಲೆಗೆ ಕಿರೀಟಾಕೃತಿಯ ವರ್ಣರಂಜಿತ ಕುಲಾವಿ, ಅದರ ಬಲಭಾಗದಿಂದ ಇಳಿಬಿದ್ದ ಮುತ್ತಿನ ತುರಾಯಿ, ಕಿವಿಯಲ್ಲಿ ಕರ್ಣಕುಂಡಲಗಳು, ಕೊರಳಲ್ಲಿ ರುದ್ರಾಕ್ಷಿ ಸರ. ಕೈಗಳಿಗೆ ರುದ್ರಾಕ್ಷಿ ಮಾಲೆ, ಕಾಲಿಗೆ ಗೆಜ್ಜೆ, ಕಾವಿಯ ನಿಲುವಂಗಿ ಇಲ್ಲವೆ ಬಿಳಿಯ ಜುಬ್ಬ. ಕಾಸೆ ಪಂಚೆ, ಸೊಂಟಕ್ಕೆ ಕೆಂಪು ವಸ್ತ್ರ, ಹಣೆಯಲ್ಲಿ ವಿಭೂತಿ, ಕೈಯಲ್ಲಿ ತಾಳ ಇವಿಷ್ಟೂ ಮುಖ್ಯ ಕಥೆಗಾರರ ವೇಷಭೂಷಣಗಳಾದರೆ ಶಿಷ್ಯರು ಬಿಳಿಯ ನಿಲುವಂಗಿ, ಕಾಸೆ ಪಂಚೆ, ತಲೆಗೆ ಕಾವಿ ವಸ್ತ್ರ ಪೇಟ, ನಡುವಿಗೆ ಬಿಳಿ ನಡುಪಟ್ಟಿ, ಕಾಲಿಗೆ ಗೆಜ್ಜೆ, ಹಣೆಗೆ ವಿಭೂತಿ ಧರಿಸುತ್ತಾರೆ.

ಕರಪಾಲ ಮೇಳದಲ್ಲಿ ಬಳಸುವ ವಾದ್ಯ ವಿಶೇಷಗಳೆಂದರೆ ಗುಮಟೆ ಮತ್ತು ತಾಳ. ಗುಮಟೆಯು ಮಣ್ಣಿನಿಂದ ತಯಾರಿಸಿದ್ದು ಕುಂಭದ ಆಕಾರದಲ್ಲಿರುತ್ತದೆ. ಇದರ ಒಂದು ಬದಿಯನ್ನು ಉಡದ ಚರ್ಮದಿಂದ ಮುಚ್ಚಿದ್ದು ಮತ್ತೊಂದು ಬದಿ ತೆರೆದಿರುತ್ತದೆ. ಕರಪಾಲ ಮೇಳದ ಕುಣಿತಕ್ಕೆ ವಿಶೇಷವಾದ ಗತ್ತುಗಳನ್ನು ಒದಗಿಸುವ ವಾದ್ಯವಿದು. ಇತ್ತೀಚೆಗೆ ಗುಮಟೆ ಮತ್ತು ತಾಳಗಳೊಂದಿಗೆ ಹಾರ್ಮೋನಿಯಂ ಮತ್ತು ಮದ್ದಳೆಯನ್ನು ಬಳಸಲಾಗುತ್ತಿದೆ.

ಕರಪಾಲ ಮೇಳದ ಸಂಪೂರ್ಣ ಯಶಸ್ಸು ಮುಖ್ಯ ಕಥೆಗಾರನನ್ನು ಅವಲಂಬಿಸಿರುತ್ತದೆ. ಮೇಳದ ಜೀವನಾಡಿಯೇ ಮುಖ್ಯ ಕಥೆಗಾರ. ಇವನ ನಿರೂಪಣಾ ವೈಖರಿಯಿಂದ ಮೇಳವು ಕಳೆಗಟ್ಟುತ್ತದೆ. ಅನಗತ್ಯವಾಗಿ ಹಾಡು ವಿಸ್ತರಿಸದೆ ಸೊಗಸಾದ ವರ್ಣನೆಗಳನ್ನು ನೀಡುತ್ತಾ ಪ್ರೇಕ್ಷಕರ ಮನಸ್ಸನ್ನು ಸೆರೆ ಹಿಡಿಯುತ್ತಾನೆ. ಹಾಡಿನೊಂದಿಗೆ ವರ್ಣಿಸಿಕೊಂಡು ಕಥೆಯನ್ನು ಹೇಳುತ್ತಾ ಕುಣಿಯುವ ರೀತಿ

ಸುಂದರವಾಗಿರುತ್ತದೆ. ಕಥೆಯ ಮಧ್ಯೆ ಉಪಕಥೆಗಳನ್ನು ಹೇಳುತ್ತಾ ಶ್ರೋತೃಗಳನ್ನು ರಂಜಿಸುತ್ತ ಮತ್ತೆ ಮುಖ್ಯ ಕಥೆಗೆ ಕರೆತರುವ ರೀತಿಯು ಅಸದೃಶವಾದುದು. ಶಿಷ್ಯರೂ ಸಹ ಗುರುವನ್ನು ಛೇಡಿಸುತ್ತಾ, ಕುತೂಹಲದಿಂದ ಕೊಂಕು ಮಾತುಗಳನ್ನಾಡುತ್ತಾ ಸಂಭಾಷಣೆಯಲ್ಲಿ ನಿರತರಾಗಿರುತ್ತಾರೆ.

ಕರಪಾಲದ ಸುಶ್ರಾವ್ಯವಾದ ಹಾಡುಗಾರಿಕೆ, ಕಥೆಯ ನಿರೂಪಣಾ ವೈಖರಿ, ಸಂಭಾಷಣಾ ಶೈಲಿಗಳು ಆಕರ್ಷಣೀಯವಾದವುಗಳಾಗಿದ್ದು ಮುಖ್ಯ ಕಥೆಗಾರನು ಇವು ಮೂರನ್ನು ಮೇಳದಲ್ಲಿ ಪರಿಣಾಮಕಾರಿಯಾಗಿ ನಿರ್ವಹಿಸುತ್ತಾನೆ. ತನ್ನ ನಿರೂಪಣಾ ಕೌಶಲ್ಯದಿಂದ ಕೇಳುಗರನ್ನು ಮೋಡಿ ಮಾಡುತ್ತಾನೆ. ಶೈವ ಪಂಥಕ್ಕೆ ಸೇರಿದ ಕರಪಾಲದವರು ಕಾಡ ಸಿದ್ದಮ್ಮನ ಕಥೆ, ಬಸವ ಕುಮಾರ ಲೋಹಿತಕುಮಾರ, ನೀಲಕಂಠ ರೂಪಾವತಿ, ಶಿವಯೋಗಿ ಪರಯೋಗಿ ಮುಂತಾದ ಕಥೆಗಳನ್ನು ಪ್ರದರ್ಶಿಸುತ್ತಾರೆ. ಕರಪಾಲದವರ ನಿರೂಪಣಾ ವೈಖರಿಗೆ ಮಾರು ಹೋಗಿರುವ ಗ್ರಾಮೀಣರು ಅವರನ್ನು ಹಬ್ಬ ಹರಿದಿನಗಳಲ್ಲಿ, ಜಾತ್ರೆ ಉತ್ಸವಗಳಲ್ಲಿ ಬರಮಾಡಿಕೊಂಡು ಅವರುಗಳಿಂದ, ಕಥೆ ಹೇಳಿಸಿ, ಕೇಳಿ ಗೌರವಿಸಿ ಕಳುಹಿಸುತ್ತಾರೆ.

ಕಂಸಾಳೆಯವರು

ಚಾಮರಾಜನಗರ, ಮೈಸೂರು, ಮಂಡ್ಯ, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಕಂಡು ಬರುವ ಕಂಸಾಳೆಯವರು ಆರಾಧ್ಯ ದೈವವೊಂದರ ಹಿನ್ನೆಲೆಯಲ್ಲಿ ಹುಟ್ಟಿಕೊಂಡ ವಿಶಿಷ್ಟ ಗಾಯಕರು. ಈ ಗಾಯಕರು ತಮ್ಮ ಆರಾಧ್ಯ ದೈವದ ಪವಾಡಗಳು, ಮಹಿಮೆಗಳನ್ನು ವಿಸ್ತರಿಸುತ್ತ, ಅವುಗಳಿಗೆ ಸಂಬಂಧಿಸಿದಂತೆ ಕತೆ ಕಟ್ಟಿ ಹಾಡುತ್ತಾ ತಮ್ಮ ಸಂಪ್ರದಾಯಕ್ಕೆ ನಿಷ್ಠೆಯಿಂದ ನಡೆದುಕೊಳ್ಳುತ್ತಾರೆ. ಸಾಮಾನ್ಯವಾಗಿ ಈ

ಗಾಯಕವರ್ಗವು ವಂಶ ಪಾರಂಪರ್ಯವಾಗಿ ಇಲ್ಲವೆ ಗುರು ಶಿಷ್ಯ ಸಂಬಂಧದಲ್ಲಿ, ಆರಾಧ್ಯ ದೈವದ ಹೆಸರಿನಲ್ಲಿ ದೀಕ್ಷೆ ಪಡೆದು



ಬದುಕಿನುದ್ದಕ್ಕೂ ಹಾಡುಗಾರಿಕೆಯನ್ನು ವಿಶೇಷ ವೃತ್ತಿಯನ್ನಾಗಿ ಸ್ವೀಕರಿಸುತ್ತಾರೆ.

ಕಂಸಾಳೆಯವರು ಚಾಮರಾಜನಗರ ಜಿಲ್ಲೆಯ ಮಲೆ ಮಹದೇಶ್ವರ ಬೆಟ್ಟದಲ್ಲಿ ನೆಲೆಸಿರುವ ಮಹದೇಶ್ವರನ ದೇವರ ಗುಡ್ಡರು ಅಂದರೆ ಭಕ್ತರು. ಇವರು ಬಳಸುವ ವಿಶಿಷ್ಟ ವಾದ್ಯ ಪ್ರಕಾರವಾದ ಕಂಸಾಳೆಯಿಂದ ಇವರಿಗೆ ಕಂಸಾಳೆಯವರು ಎಂಬ ಹೆಸರು ಬಂದಿದೆ. ಕಂಸಾಳೆಯು ಕಂಚಿನಿಂದ ತಯಾರುಮಾಡಿದ ಒಂದು ತಾಳವಾದ್ಯ. ಈ ವಾದ್ಯದಲ್ಲಿ ಎರಡು ಘಟಕಗಳಿರುತ್ತವೆ. ಮಧ್ಯೆ ದಾರ ಕಟ್ಟಿರುವ ಅಂಗೈ ಅಗಲದ ಬಟ್ಟಲು ಒಂದು ಘಟಕವಾದರೆ, ಬಟ್ಟಲಿಗಿಂತ ಅಗಲವಾದ ಬಟ್ಟಲಿನ ಆಕಾರದ ಮಟ್ಟಸವಾದ ತಾಳವು ಇನ್ನೊಂದು ಘಟಕ. ಈ

ಮುಚ್ಚಳದ ನಡುವಣ ಉಬ್ಬಿದ ಭಾಗದಲ್ಲಿ ರಂಧ್ರ ಮಾಡಿದ್ದು ಅದಕ್ಕೆ ನೂಲಿನ ದಾರವನ್ನು ಕಟ್ಟಿ ವಿವಿಧ ಗೊಂಡೆ, ಗಗ್ಗರಗಳಿಂದ ಅಲಂಕರಿಸಿರುತ್ತಾರೆ. ಈ ದಾರವು ಮುಚ್ಚಳವನ್ನು ಹಿಡಿಯಲು ಅನುಕೂಲವಾಗಿದ್ದು ಅರ್ಧ ಮಾರಿನಷ್ಟು ಉದ್ದವಿರುತ್ತದೆ. ಎಡಗೈಯಲ್ಲಿ ಬಟ್ಟಲನ್ನು ಹಿಡಿದು ಬಲಗೈಯಲ್ಲಿ ಮುಚ್ಚಳವನ್ನು ಹಿಡಿದು ಒಂದಕ್ಕೊಂದು ತಟ್ಟಿದರೆ ವಿಶಿಷ್ಟವಾದ ನಾದವು ಹೊರಹೊಮ್ಮುತ್ತದೆ. ಕಂಸಾಳೆಯನ್ನು ಕೈಸಾಲೆ, ಕೌಸಾಳೆ, ಕೈತಾಳ, ಬಟ್ಲು ಇತ್ಯಾದಿ ಹೆಸರುಗಳಿಂದ ಕರೆಯುತ್ತಾರೆ.

ಕಂಸಾಳೆಯವರು ಶುಭ್ರವಾದ ಬಿಳಿಯ ಕಸೆ ಅಂಗಿ, ಬಿಳಿಯ ಇಲ್ಲವೆ ಕಾವಿ ಧೋತರ, ಕೊರಳಲ್ಲಿ ರುದ್ರಾಕ್ಷಿ ಮಣಿ, ಸೊಂಟಕ್ಕೊಂದು ಕೆಂಪು ವಸ್ತ್ರ, ಹಣೆಯಲ್ಲಿ ವಿಭೂತಿ ಧರಿಸಿ ಕೈಯಲ್ಲಿ ಕಂಸಾಳೆ ಹಿಡಿದಿರುತ್ತಾರೆ. ಬಗಲಲ್ಲಿ ಬಿಳಿಯ ಜೋಳಿಗೆ ಇರುತ್ತದೆ. ಗುರುಮುಖೇನ ದೀಕ್ಷೆ ಸ್ವೀಕರಿಸಿ ಮಾದೇಶ್ವರನ ಗುಡ್ಡರಾಗಿ ಊರೂರು ಸಂಚರಿಸುತ್ತಾ ಮಾದೇಶ್ವರನ ಸೇವೆ ಮಾಡುತ್ತಾರೆ. ದೀಪಾವಳಿ, ಯುಗಾದಿ, ಶಿವರಾತ್ರಿ ಸಂದರ್ಭಗಳಲ್ಲಿ ತಪ್ಪದೆ ತಮ್ಮ ಆರಾಧ್ಯ ದೈವದ ದರ್ಶನಕ್ಕೆ ಹೋಗುತ್ತಾರೆ.

ಕಂಸಾಳೆಯವರು ಹಾಡುಗಾರಿಕೆಯ ಮೇಳ ನಡೆಸುತ್ತಾರೆ. ಕಂಸಾಳೆ ಮೇಳದಲ್ಲಿ ಸಾಮಾನ್ಯವಾಗಿ ಮೂರರಿಂದ ಎಂಟು ಮಂದಿ ಪಾಲ್ಗೊಳ್ಳುತ್ತಾರೆ. ಮುಮ್ಮೇಳದವರು ಹಿಮ್ಮೇಳದವರು ಇರುತ್ತಾರೆ. ಮುಖ್ಯವಾಗಿ ತಮ್ಮ ಆರಾಧ್ಯ ದೈವವಾದ ಮಲೆ ಮಹದೇಶ್ವರನ ಪವಾಡಗಳನ್ನು ಕುರಿತು ಹಾಡುತ್ತಾರೆ. ಅನೇಕ ರಾತ್ರಿಗಳ ಕಾಲ ಹಾಡಬಹುದಾದ ಜನಪದ ಮಹಾಕಾವ್ಯ 'ಮಲೆ ಮಹದೇಶ್ವರ' ಕಂಸಾಳೆಯವರ ನೆಚ್ಚಿನ ಧಾರ್ಮಿಕ ಕಾವ್ಯ. ಈ

ಮಹಾಕಾವ್ಯವು ಏಳು ಸಾಲುಗಳಲ್ಲಿ ಹರಿದು ಬರುತ್ತದೆ. ಒಂದೊಂದು ಸಾಲನ್ನು ಒಂದೊಂದು ರಾತ್ರಿ ಹಾಡುತ್ತಾರೆ. ಸಾಲು ಅಂದರೆ ಅಧ್ಯಾಯ, ಖಂಡ, ಪರ್ವ, ಭಾಗ, ಎನ್ನಬಹುದು. ತಾಳುಗತೆ, ಶ್ರವಣದೊರೆಯ ಸಾಲು, ಜುಂಜೇಗೌಡನ ಸಾಲು, ಶಂಕಮ್ಮನ ಸಾಲು, ಇಕ್ಕೇರಿ ದೇವಮ್ಮನ ಸಾಲು, ಬೇವಿನಹಟ್ಟಿ ಕಾಳಿಯ ಸಾಲು, ಸರಗೂರಪ್ಪನ ಸಾಲು ಹೀಗೆ ಏಳು ಸಾಲುಗಳನ್ನು ಹಾಡುತ್ತಾರೆ. ಇದನ್ನು ಕಥೆ ಮಾಡುವುದು ಎನ್ನುತ್ತಾರೆ. ಕಥೆ ಮಾಡುವ ಮೊದಲಿಗೆ ಗಣಪತಿ, ಸರಸ್ವತಿಯರನ್ನು ಪ್ರಾರ್ಥಿಸಿ ಅಂತ್ಯದಲ್ಲಿ ಮಂಗಳದೊಂದಿಗೆ ಮುಕ್ತಾಯಗೊಳಿಸುತ್ತಾರೆ. ಮುಮ್ಮೇಳದ ಹಾಡುಗಾರರು ಎಡಗೈ ಬಟ್ಟಲನ್ನು ಮೇಲ್ಮುಖಗೊಳಿಸುತ್ತಾರೆ. ಮುಮ್ಮೇಳದ ಹಾಡುಗಾರರು ಎಡಗೈ ಬಟ್ಟಲನ್ನು ಮೇಲ್ಮುಖವಾಗಿರಿಸಿಕೊಂಡು ಬಲಗೈಯಲ್ಲಿ ಹಿಡಿದ ತಾಳಕ್ಕೆ ಕುಟ್ಟುವಾಗ ಹೊಮ್ಮುವ ನಾದ ಮತ್ತು ಹಾಡಿನ ಲಯವನ್ನನುಸರಿಸಿ ಕಥೆ ಸಾಗುತ್ತದೆ.

ಕಂಸಾಳೆಯವರು ತಮ್ಮ ಆರಾಧ್ಯ ದೈವದ ಕಥೆಯನ್ನಷ್ಟೇ ಅಲ್ಲದೆ, ನಂಜುಂಡ ಚಾಮುಂಡಿ, ಪಿರಿಯಾಪಟ್ಟಣದ ಕಾಳಗ, ಸಾರಂಗಧರ, ಬಾಲನಾಗಮ್ಮ, ಚನ್ನಿಗರಾಯ ಮೊದಲಾದ ಲೌಕಿಕ ಕಾವ್ಯಗಳನ್ನು ಹಾಡುತ್ತಾರೆ.

ಕರ್ನಾಟಕದ ಅತ್ಯಂತ ಉತ್ಕೃಷ್ಟ ಧಾರ್ಮಿಕ ವೃತ್ತಿಗಾಯಕ ಪರಂಪರೆಗೆ ಸೇರಿದ ಕಂಸಾಳೆಯವರಲ್ಲಿ ಅಮೂಲ್ಯವಾದ ಜನಪದ ಸಾಹಿತ್ಯ ನಿಧಿ ಇದೆ. ಕಂಸಾಳೆ ಕಾವ್ಯಗಳನ್ನು ಜೀ.ಶಂ. ಪರಮಶಿವಯ್ಯ, ಪಿ.ಕೆ. ರಾಜಶೇಖರ, ಚಕ್ಕೆರೆ ಶಿವಶಂಕರ್, ಹಿ. ಚಿ. ಬೋರಲಿಂಗಯ್ಯ ಮುಂತಾದ ವಿದ್ವಾಂಸರು ಸಂಗ್ರಹಿಸಿರುತ್ತಾರೆ. ಕಂಸಾಳೆಯವರಲ್ಲಿ 'ಬೀಸು ಕಂಸಾಳೆ' ಎಂಬ ರೋಮಾಂಚನಕಾರಿಯಾದ ಕುಣಿತವೂ ರೂಢಿಯಲ್ಲಿದೆ.

ಕಿನ್ನರಿಜೋಗಿ ಮೇಳ

ಕರ್ನಾಟಕದ ಜನಪ್ರಿಯ ವೃತ್ತಿಗಾಯಕರಾದ ಕಿನ್ನರಿಜೋಗಿಗಳು ಸೌಂದರ್ಯಕ್ಕೆ ಮತ್ತು ಆಕರ್ಷಣೆಗೆ ಹೆಸರಾದವರು. ಇವರ ವೇಷಭೂಷಣಗಳು ಮನಮೋಹಕವಾದುವು. ತಲೆಗೆ ಚಂದ್ರಬಿಲ್ಲೆ, ಮಣಿಕುಚ್ಚು, ಗಳಾಪುಗಳಿಂದ ಅಲಂಕರಿಸಿದ ಮುಂಡಾಸು. ಅದಕ್ಕೊಂದು ಸಣ್ಣ ತ್ರಿಶೂಲ, ಕರಿಯ ನಿಲುವಂಗಿ, ಕಚ್ಚೆ ಪಂಚೆ, ಕೊರಳಿಗೆ ನೇತಾಡುವ ಮುತ್ತಿನ ಸರಗಳು, ರುದ್ರಾಕ್ಷಿ ಹಾರ, ಕಿವಿಗಳಿಗೆ ಕರ್ಣಕುಂಡಲ, ಕಾಪಾಲಿ, ಹಣೆಯಲ್ಲಿ ವಿಭೂತಿ ಮತ್ತು



ಅರ್ಧಚಂದ್ರಾಕೃತಿಯ ನಾಮ, ಬಗಲಲ್ಲಿ ಜೋಳಿಗೆ, ಕಾಲಿಗೆ ಗೆಜ್ಜೆ, ಕೈಯಲ್ಲಿ ಕಿನ್ನರಿ.

ಕಿನ್ನರಿಯು ತಂತಿ ವಾದ್ಯ. ಸುಮಾರು ಮೂರು ಮೊಳ ಉದ್ದದ

ಬಿದಿರಿನ ಗಳುವಿಗೆ ಮೂರು ಸೋರೆ ಬುರುಡೆಗಳು. ಎರಡು ದೊಡ್ಡದು, ಒಂದು ಚಿಕ್ಕದು. ಬಿದಿರಿನ ಹೊರ ಮೈಗೆ ಮುಳ್ಳುಹಂದಿಯ ಚಿಪ್ಪಿನಿಂದ ಮಾಡಿದ ಹತ್ತು ಇಲ್ಲವೆ ಹನ್ನೆರಡು ಮೆಟ್ಟಿಲುಗಳು. ಇವುಗಳನ್ನು ಸಾರಿ ಎಂದು ಕರೆಯುತ್ತಾರೆ. ಈ ಸಾರಿಗಳನ್ನು ಗಳಕ್ಕೆ ಜೇನುಮೇಣದಿಂದ ಅಂಟಿಸುತ್ತಾರೆ. ಬಿದಿರಿನ ಒಂದು ತುದಿಯಲ್ಲಿ ತಿರುಪುಳ್ಳ ಶೂಲದ ಕಡ್ಡಿಯನ್ನು ಬಂಧಿಸಿದ್ದು ಮತ್ತೊಂದು ತುದಿಯಲ್ಲಿ ಮರದ ಗಿಣಿಯನ್ನು ಸಿಕ್ಕಿಸಿರುತ್ತಾರೆ. ಸಾರಿಯ ಮೇಲಿನಿಂದ ಹಾಯ್ದು ಬರುವ ತಂತಿಗಳು ಈ ಮರದ ಗಿಣಿಯನ್ನು ಸುತ್ತುವರಿದಿರುತ್ತವೆ. ಶೂಲದ ಕಡ್ಡಿಗಳನ್ನು ತಿರುಗಿಸಿ ಶ್ರುತಿಗೆ ಸರಿಹೊಂದಿಸಿಕೊಳ್ಳುತ್ತಾರೆ. ಗಳುವಿನ ಚೂಪು ತುದಿಗೆ ನವಿಲುಗರಿಯನ್ನು ಸಿಕ್ಕಿಸಿ ಕಿನ್ನರಿಯನ್ನು ಸುಂದರಗೊಳಿಸಿರುತ್ತಾರೆ. ತಮ್ಮ ವೇಷಭೂಷಣಗಳಷ್ಟೇ ಅಲ್ಲದೆ, ತಾವು ಬಾರಿಸುವ ಕಿನ್ನರಿ ವಾದ್ಯವೂ ಸಹ ಅಂದವಾಗಿ ಕಾಣಬೇಕೆನ್ನುವ ಸೌಂದರ್ಯಾರಾಧಕರು ಕಿನ್ನರಿಜೋಗಿಗಳು.

ತಾವು ಪಾಂಡವ ಪರಂಪರೆಗೆ ಸೇರಿದವರು. ಅರ್ಜುನನೇ ತಮಗೆ ಮೂಲಗುರು. ಅರ್ಜುನನಿಂದ ಕಿನ್ನರಿ ವಾದ್ಯ ತಮಗೆ ಬಳುವಳಿ ಬಂದಿದೆ ಎಂದು ಹೇಳಿಕೊಳ್ಳುವ ಕಿನ್ನರಿ ಜೋಗಿಗಳು ಭೈರವನ ಆರಾಧಕರು. ಕಿವಿಗೆ 'ಕಪಾಲಿ' ತೊಡಿಸಿ ಕರ್ಣಕುಂಡಲವಿಟ್ಟು ಭೈರವನ ಸನ್ನಿಧಿಯಲ್ಲಿ ದೀಕ್ಷೆ ಪಡೆಯುತ್ತಾರೆ. ಕುತ್ತಿಗೆಗೆ ಸಿಂಗನಾತ ಕಟ್ಟಿಕೊಳ್ಳುತ್ತಾರೆ.

ಕಿನ್ನರಿಜೋಗಿಗಳು ಮೂಲತಃ ಗಾಯನ ಸಂಪ್ರದಾಯಕ್ಕೆ ಸೇರಿದವರು. ಹಾಡುವಾಗ ಕಿನ್ನರಿ ಮತ್ತು ಚಿಟಕಿಯ ತಾಳಕ್ಕೆ ಅನುಗುಣವಾಗಿ ಲಘುವಾದ ಕುಣಿತ ಮಾಡುತ್ತಾರೆ. ಕಿನ್ನರಿ, ದಂಬರಿಗೆ, ಪಿಳ್ಳಂಗೋವಿ, ಚಿಟಿಕಿ, ಗಗ್ಗರ, ಕಿರುಗೆಜ್ಜೆ ಇದು ಕಿನ್ನರಿ ಜೋಗಿಗಳು

ಬಳಸುವ ವಾದ್ಯಗಳು. ಸಾಮಾನ್ಯವಾಗಿ ಮೂರರಿಂದ ಐದುಮಂದಿ ಇರುವ ತಂಡದಲ್ಲಿ ಮುಮ್ಮೇಳದ ಹಾಡುಗಾರ ಹಾಡುತ್ತಾ ಕುಣಿಯುತ್ತಾನೆ. ಉಳಿದವರು ಹಿಮ್ಮೇಳ ಹಾಡುತ್ತಾ ಮುಮ್ಮೇಳದವನ ಕುಣಿತಕ್ಕೆ ಹೆಜ್ಜೆ ಹಾಕುತ್ತಾ ನರ್ತಿಸುತ್ತಾರೆ. ಕಿನ್ನರಿ ಜೋಗಿಗಳ ಹಾಡಿನ ಧಾಟಿಯೇ ವಿಶಿಷ್ಟವಾದುದು. ಸಂಗೀತ, ನೃತ್ಯ, ಸಾಹಿತ್ಯ ಮತ್ತು ಸಂಭಾಷಣೆಗಳಿಂದ ಕೂಡಿದ ಇವರ ಕಥನ ಕಲೆ ರಂಜನೀಯವಾದುದು.

ಕಿನ್ನರಿಜೋಗಿಗಳು ಬಸವ ಕುಮಾರ– ಲೋಹಿತಕುಮಾರ, ರಾಜಹಂಸ – ಪರಮಹಂಸ, ಚಿತ್ರಶೇಖರ – ಸೋಮಶೇಖರ, ಲಕ್ಷಾಪತಿ ರಾಜನ ಕಥೆ ಮುಂತಾದ ಹಾಡ್ಗಥೆಗಳನ್ನು ಹಾಡುವುದಲ್ಲದೆ, ಸಮಕಾಲೀನ ಸಂದರ್ಭದ ಪ್ರಚಲಿತ ವಿಷಯಗಳಿಗೂ ಸಹ ತಮ್ಮ ಹಾಡಿನ ರೀತಿಯನ್ನು ಒಗ್ಗಿಸಿಕೊಂಡಿದ್ದಾರೆ. ಆಧುನಿಕ ನಾಟಕಕಾರರು ಕಿನ್ನರಿಜೋಗಿಗಳ ಕಥನ ಕಲೆಯನ್ನು ಪರಿಣಾಮಕಾರಿಯಾಗಿ ಬಳಸಿಕೊಂಡಿರುತ್ತಾರೆ.

ಶಿವಮೊಗ್ಗ, ಧಾರವಾಡ, ಬಿಜಾಪುರ ಮತ್ತು ಬೆಳಗಾಂ ಜಿಲ್ಲೆಗಳಲ್ಲಿ ಹೆಚ್ಚಾಗಿ ಕಂಡು ಬರುವ ಈ ಕಲಾವಿದರನ್ನು 'ದೇವರ ಮಕ್ಕಳು' ಎಂದೂ ಕರೆಯುವುದುಂಟು.

ಗೀಗೀ ಮೇಳ

ಉತ್ತರ ಕರ್ನಾಟಕದ ಗೀತಪ್ರಧಾನ ಮೇಳಗಳಲ್ಲಿ ಅತ್ಯಂತ ಜನಪ್ರಿಯವಾದುದು ಗೀಗೀ ಮೇಳ. ಗೀಗೀ ಎನ್ನುವಂಥದ್ದು ಲಾವಣಿ ಮೇಳದ ಒಂದು ಲಘು ಪ್ರಕಾರ ಮತ್ತು ಹಾಡಿನ ಪ್ರತಿಯೊಂದು ಸಾಲಿನ ಅಂತ್ಯದಲ್ಲೂ ಹಿಮ್ಮೇಳದವರು ಎತ್ತಿಕೊಳ್ಳುವ ಒಂದು ಪದಗುಂಫನ.

ಗೀಗೀ ಮೇಳದಲ್ಲಿ ಸಾಮಾನ್ಯವಾಗಿ ಮೂವರು ಕಲಾವಿದರಿರುತ್ತಾರೆ. ಪುರುಷರು, ಮಹಿಳೆಯರು ಒಟ್ಟಾಗಿ ಮೇಳದಲ್ಲಿರುತ್ತಾರೆ. ಇಲ್ಲವೆ ಪುರುಷರೇ ಪ್ರತ್ಯೇಕವಾಗಿರುತ್ತಾರೆ. ಕಾಸೆಯುಟ್ಟ ಬಿಳಿಯ ಧೋತರ, ಬಿಳಿಯ ನಿಲುವಂಗಿ, ಅದರ ಮೇಲೊಂದು ತೋಳಿಲ್ಲದ ಅರೆ ಕೋಟು,



ಸೊಂಟಕ್ಕೆ ನಡುಕಟ್ಟು, ಹೆಂಗಸಾದರೆ ದಿನನಿತ್ಯದ ಸೀರೆ ರವಿಕೆ. ಗಂಡಸರು ತಲೆಗೆ ರುಮಾಲು ಇಲ್ಲವೆ ಗಾಂಧಿ ಟೋಪಿ ಧರಿಸುವುದುಂಟು. ಇವು ಗೀಗೀ ಮೇಳದವರ ಸಾಮಾನ್ಯ ಉಡುಗೆ. ಮುಮ್ಮೇಳದ ಹಾಡುಗಾರ ಹಲಗೆ ಅಥವಾ ದಪ್ಪು ಬಾರಿಸುತ್ತಾ ಹಾಡಿದರೆ ಹಿಮ್ಮೇಳದವರು ಏಕತಾರಿ, ತುಂತುಣಿಗಳನ್ನು ಬಾರಿಸುತ್ತಾ ಹಾಡಿನ ಪ್ರತೀ ಸಾಲಿಗೊಮ್ಮೆ 'ಗೀಯ ಗೀಯ ಗಾಗೀಯ ಗೀಯ' ಎಳೆದು ಹೇಳುತ್ತಿರುತ್ತಾರೆ. ಗೀಗೀ ಮೇಳದ ಸೊಗಸಿರುವುದೇ ಈ ಅಂತ್ಯದ ಸೊಲ್ಲಿನಲ್ಲಿ. ಹಾಡಿನ ಮಧ್ಯೆ ಮುಮ್ಮೇಳದವರಿಗೆ ಸ್ಫೂರ್ತಿ

ತುಂಬಲು 'ಹಾಂ, ಹೌದಪ್ಪ, ಹೇಳಪ್ಪಾ, ಹೇಳವ್ವಾ' ಎಂದು ಪ್ರಚೋದಿಸುತ್ತಿರುತ್ತಾರೆ.

ಗೀಗೀ ಮೇಳದವರು ಹಾಡುಗಳ ಮೂಲಕ ಜನರಿಗೆ ಧರ್ಮ, ತತ್ವ ಮತ್ತು ನೀತಿಯನ್ನು ಬೋಧಿಸುತ್ತಾರೆ. ರಾಮಾಯಣ, ಮಹಾಭಾರತದಂತಹ ಪೌರಾಣಿಕ ಪ್ರಸಂಗಗಳಿಂದ ಮೊದಲುಗೊಂಡು ಕಿತ್ತೂರು ಚೆನ್ನಮ್ಮ, ಸಂಗೊಳ್ಳಿರಾಯಣ್ಣ, ನರಗುಂದದ ಬಾಬಾಸಾಹೇಬರನ್ನು ಕುರಿತಾದ ಚಾರಿತ್ರಿಕ ಸಂಗತಿಗಳನ್ನು ವೈವಿಧ್ಯಮಯ ಮಟ್ಟುಗಳಲ್ಲಿ ಹಾಡುತ್ತಾರೆ. ಭಾರತೀಯ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಗೀಗೀ ಮೇಳವು ವಹಿಸಿದ ಪಾತ್ರ ಅದ್ಭುತವಾದುದು. ಗಾಂಧೀಜಿ, ನೇತಾಜಿಯವರ ಸಂದೇಶಗಳನ್ನು ಮನೆ ಮನೆಗಳಿಗೆ ತಲುಪಿಸಿದ ಸ್ವಾತಂತ್ರ್ಯ ಸಂದೇಶ ಪ್ರಸಾರಕರಾಗಿದ್ದರು. ಸಾಕ್ಷರತೆ, ವರದಕ್ಷಿಣೆ ಪಿಡುಗು, ಕುಟುಂಬ ಯೋಜನೆಯಂತಹ ಸಮಕಾಲೀನ ಸಂಗತಿಗಳನ್ನು ಸ್ವಾರಸ್ಯಕರವಾದ ರೀತಿಯಲ್ಲಿ ಹಾಡು ಕಟ್ಟಿ ಹೇಳುವ ಆಶು ಕವಿಗಳು. ಪ್ರೇಕ್ಷಕರಿಗೆ ಬೇಸರ ಉಂಟಾಗದಂತೆ ಹಾಸ್ಯದ ಚುಟುಕುಗಳನ್ನು ಸೇರಿಸಿ ಹಾಡುತ್ತಾರೆ.

ಗೀಗೀ ಮೇಳಗಳ ಸಾಹಿತ್ಯರೂಪ ವಿಸ್ತಾರವಾದುದು. ನೀತಿ, ಶೃಂಗಾರ, ತತ್ವಗಳನ್ನು ಸಾರುವಂತಹ ಕಿರು ರಚನೆಗಳಲ್ಲದೆ, ಇಡೀ ರಾತ್ರಿ ಹಾಡಿದರೂ ಮುಗಿಯದ ಸವಾಲ್-ಜವಾಬ್ ಲಾವಣಿ, ಕಥನ ಲಾವಣಿಗಳ ಸರಕು ಗೀಗೀ ಮೇಳದವರಲ್ಲಿದೆ. ಇವರಲ್ಲಿ ಉತ್ತಮ ಹಾಡುಗಾರಿಕೆಯ ಜತೆಗೆ ಸೊಗಸಾದ ಲಾಲಿತ್ಯಪೂರ್ಣವಾದ ಕುಣಿತವೂ ಇದೆ. ಗೆಜ್ಜೆ ಕಟ್ಟಿದ ಕಾಲುಗಳನ್ನು ಅತ್ತಿಂದಿತ್ತ ಆಡಿಸುತ್ತಾ, ರಂಗದ ಆ ಬದಿಯಿಂದ ಈ ಬದಿಗೆ ಲಘುವಾಗಿ ನೆಗೆಯುವ ಗಮ್ಮತ್ತು ತೋರುತ್ತಾರೆ. ನಿಂತಲ್ಲೇ ಸುತ್ತುಗುಣಿಯುತ್ತಾರೆ. ಕತ್ತು ಹೊರಳಿಸುತ್ತಾ ಮಾತು ಮಾತಿಗೆ ಅಥವಾ ಪಲ್ಲವಿಗೊಂದು ಸಾರಿ 'ಚ್ಯಾಲಿ'ನ ಏರಿಳಿತಗಳಿಗೆ ಅನುಗುಣವಾಗಿ ಕೈ ಬೀಸುವುದನ್ನು ನೋಡುವುದು ಚಂದ.

ಗೀಗೀ ಮೇಳದಲ್ಲಿ ಕಲ್ಗಿ-ತುರಾ ಎಂಬ ಅತ್ಯುತ್ತಮ ಪ್ರಕಾರವಿದೆ. ಇದಕ್ಕೆ ಹರದೇಶಿ ನಾಗೇಶಿ, ಸವಾಲ್-ಜವಾಬ್ ಲಾವಣಿ ಎಂದೂ ಕರೆಯುತ್ತಾರೆ. ಒಂದು ತಂಡ ಗಂಡಿನ ಮೇಲ್ಮೆಯನ್ನು ಎತ್ತಿ ಹಿಡಿದು ಹಾಡಿದರೆ, ಮತ್ತೊಂದು ತಂಡ ಗಂಡಿನ ದೌರ್ಬಲ್ಯಗಳನ್ನು ಪಟ್ಟಿ ಮಾಡುತ್ತಾ ಹೆಣ್ಣಿನ ಮೇಲ್ಮೆಯನ್ನು ಎತ್ತಿ ಹಿಡಿದು ಹಾಡುತ್ತದೆ. ಈ ಮೇಳಗಳಲ್ಲಿ ಮುಂದೆ ನಿಂತು ಹಾಡುವವರು ಮಹಿಳೆಯರು. ಕಲ್ಗಿ-ತುರಾ ಮೇಳದಲ್ಲಿ ಪ್ರೇಕ್ಷಕ ಗುಂಪಿನಲ್ಲಿ ಹೆಂಗಸರು ಗಂಡಸರೆಲ್ಲರೂ ಪಾಲ್ಗೊಳ್ಳುತ್ತಾರೆ. ತಂತಮ್ಮ ಪಕ್ಷಗಳ ಮೆಚ್ಚುಗೆ ಬಂದಾಗ ಕೈಎತ್ತಿ ಅಭಿಮಾನದಿಂದ ಗಾಯಕರನ್ನು ಪ್ರಶಂಸಿಸುತ್ತಾರೆ.

ಹಬ್ಬ ಹರಿದಿನಗಳಲ್ಲಿ, ಜಾತ್ರೆ-ಉತ್ಸವಗಳಲ್ಲಿ, ಸಾರ್ವಜನಿಕ ಸಮಾರಂಭಗಳಲ್ಲಿ ಗೀಗೀ ಮೇಳಗಳು ಪ್ರದರ್ಶನಗೊಳ್ಳುತ್ತವೆ. ವೃತ್ತಿಗಾಯನ ಕಲೆಯಾಗಿ ಉಳಿದಿರುವ ಗೀಗೀ ಮೇಳವು ಇಂದಿಗೂ ತನ್ನ ವೈಶಿಷ್ಟ್ಯ ಮತ್ತು ಜನಪ್ರಿಯತೆಗಳನ್ನು ಉಳಿಸಿಕೊಂಡು ಬಂದಿದೆ.

ಗೊರವರು

ಗೊರವರು ಮೈಲಾರಲಿಂಗನ ಗುಡ್ಡರು ಅಂದರೆ ಭಕ್ತರು. ಗೊರವರನ್ನು ಕರ್ನಾಟಕದ ಭಾಗದಲ್ಲಿ ಗೊರವ, ಗೊಗ್ಗಯ್ಯ, ಗಡಬಡ್ಡಯ್ಯ ಎಂದು, ಉತ್ತರ ಭಾಗದಲ್ಲಿ ಗ್ವಾರಪ್ಪ, ವಗ್ಗ, ವಾಘ್ಯಾ ಎಂದೂ ಕರೆಯುತ್ತಾರೆ. ತಲೆಯ ಮೇಲೆ ಕರಡಿ ಕೂದಲಿನ ಕುಲಾವಿ, ಕರಿಯ ಕಂಬಳಿಯ ನಿಲುವಂಗಿ, ಎದೆಗೆ ಅಡ್ಡಲಾಗಿ ಕವಡೆ ಸರಗಳ ಪಟ್ಟಿ, ಹೆಗಲಲ್ಲಿ ಜೋಳಿಗೆ, ದೋಣಿ, ಭಂಡಾರ ಚೀಲ, ಒಕ್ಕಳ ಗಂಟೆ, ತ್ರಿಶೂಲ, ನಾಗಬೆತ್ತ, ಬಲಗೈಯಲ್ಲಿ ಡಮರುಗ, ಎಡಗೈಯಲ್ಲಿ ಪಿಳ್ಳಂಗೋವಿ ಅಥವಾ ಕೊಳಲು, ಹಣೆಯಲ್ಲಿ ಢಾಳಾಗಿ ಬಳಿದ ವಿಭೂತಿ ಮತ್ತು ಕುಂಕುಮ, ಕಣ್ಣಿನ ಸುತ್ತ ವಿಭೂತಿಯ ಲೇಪ ಇವಿಷ್ಟು ಗೊರವರ ವೇಷಭೂಷಣಗಳು.

ಸುಮಾರು ಹತ್ತರಿಂದ ಹನ್ನೆರಡು ಮಂದಿ ಗೊರವರು ತಮ್ಮ ಸಾಂಪ್ರದಾಯಿಕ ವೇಷಭೂಷಣ ಧರಿಸಿ ಸಮತಟ್ಟಾದ ಬಯಲಿನಲ್ಲಿ ಇಲ್ಲವೆ ಎತ್ತರದ ಕಟ್ಟೆಯ ಮೇಲೆ ಸಾಲಾಗಿ ನಿಂತರೆಂದರೆ ರುದ್ರ



ರಮಣೀಯ ನೋಟವೇ ತೆರೆದುಕೊಳ್ಳುತ್ತದೆ. ಹಿರಿಯ ಗೊರವ ಕಲಾವಿದ ಕೊಳಲು ಊದಿ ತನ್ನ ಡಮರುಗವನ್ನು ಢಗ ಢಗ ಢಗ ಢಗ ಎಂದು ಸದ್ದು ಮಾಡುತ್ತಿದ್ದಂತೆಯೇ ಉಳಿದ ಎಲ್ಲಾ ಕಲಾವಿದರು ಒಟ್ಟಾಗಿ ತಮ್ಮ ಡಮರುಗಗಳನ್ನು ಬಾರಿಸಲು ಆರಂಭಿಸುತ್ತಾರೆ. ಆ ಡಮರುಗಳ ಸದ್ದಿಗೆ ತಕ್ಕಂತೆ ಮುಂದ್ಹೆಜ್ಜೆ, ಹಿಂದ್ಹೆಜ್ಜೆ ಹಾಕುತ್ತಾ ಕುಣಿಯಲಾರಂಭಿಸುತ್ತಾರೆ. ಮಧ್ಯೆ ಮಧ್ಯೆ ತಮ್ಮ ತಲೆಗೆ ಧರಿಸಿದ ಕರಡಿ ಕೂದಲಿನ ಕುಲಾವಿಯನ್ನು ತೆಗೆದು ಗಿರಕಿ ಹೊಡೆಯುವುದು, ಮಂಡಲಾಕಾರದಲ್ಲಿ, ಸುತ್ತುವುದು, ತಲೆಯ ಕರಡಿ ಟೊಪ್ಪಿಗೆಗಳನ್ನು ತೆಗೆದು ಮಧ್ಯದಲ್ಲಿರಿಸಿ ಅದರ ಸುತ್ತಲೂ ಕುಣಿಯುತ್ತಾರೆ.

ಗೊರವ ಕಲಾವಿದರು ಕರ್ನಾಟಕದ ಅತ್ಯಂತ ಉತ್ಕೃಷ್ಟ ಧಾರ್ಮಿಕ ವೃತ್ತಿಗಾಯಕರು. ಹತ್ತಾರು ಖಂಡ ಕಾವ್ಯಗಳನ್ನು ಹಾಡುತ್ತಾರೆ. ಬಂಜೆ ಹೊನ್ನಮ್ಮ, ನೀಲವೇಣಿ, ಅಕ್ಕ ನಾಗಮ್ಮ ಮುಂತಾದವು. ಮೈಲಾರಲಿಂಗನ ಮಹಿಮೆ, ಪವಾಡ, ಪ್ರಣಯ ಪ್ರಸಂಗಗಳನ್ನು ಒಳಗೊಂಡ ಮೈಲಾರಲಿಂಗನ ಕಾವ್ಯ ಗೊರವರ ಬಳುವಳಿ. ಬೀದರ್, ಧಾರವಾಡ, ಗುಲಬರ್ಗ, ಬಳ್ಳಾರಿ, ಬೆಳಗಾವಿ, ಶಿವಮೊಗ್ಗ, ಮೈಸೂರು, ಮಂಡ್ಯ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಚಾಮರಾಜನಗರ ಇಲ್ಲೆಲ್ಲಾ ಮೈಲಾರಲಿಂಗನ ಕ್ಷೇತ್ರಗಳಿವೆ: ಗೊರವರೂ ಇದ್ದಾರೆ

ಗೊಂದಲಿಗರ ಮೇಳ

ಬೆಳಗಾವಿ, ಧಾರವಾಡ, ಬಿಜಾಪುರ, ಬಳ್ಳಾರಿ, ರಾಯಚೂರು, ಚಿತ್ರದುರ್ಗ, ಗುಲಬರ್ಗಾ, ಮೈಸೂರು, ಶಿವಮೊಗ್ಗ ಮೊದಲಾದ ಜಿಲ್ಲೆಗಳಲ್ಲಿ ಕಂಡುಬರುವ ಗೊಂದಲಿಗರು ಕರ್ನಾಟಕದ ಉತ್ಕೃಷ್ಟ ವೃತ್ತಿಗಾಯಕ ಪರಂಪರೆಗೆ ಸೇರಿದವರು. ಸವದತ್ತಿ ಯಲ್ಲಮ್ಮ ಮತ್ತು ತುಳಜಾಪುರದ ಅಂಬಾಭವಾನಿಯ ಭಕ್ತರಾದ ಇವರು ಶಕ್ತಿ ಉಪಾಸಕರು. ಜಮದಗ್ನಿ – ರೇಣುಕಾ ಪರಂಪರೆಯವರೆಂದು ಪ್ರತೀತಿ. ಶಿವಾಜಿಯು ಗೊಂದಲಿಗರನ್ನು ಗೂಢಚಾರ ವೃತ್ತಿಗೆ ಬಳಕೆ ಮಾಡುತ್ತಿದ್ದನೆಂದು ಚರಿತ್ರೆಯಲ್ಲಿ ಉಲ್ಲೇಖವಿದೆ.

ಗೊಂದಲಿಗರಲ್ಲಿ ಕಿನ್ನರಿ ಜೋಗಿ, ಹಂದಿ ಜೋಗಿ, ಟಗರು ಜೋಗಿ, ಕೋಣಿ ಜೋಗಿ, ಗೊಂದಲಿ ಜೋಗಿ ಎಂಬ ಒಳಪಂಗಡಗಳಿವೆ. ಹಿಂದೂ ದೈವಗಳನ್ನು ಪೂಜಿಸುತ್ತಾರಾದರೂ ಅಂಬಾಭವಾನಿಯೇ ಇವರ ಕುಲದೇವತೆ. ಗೊಂದಲಿಗರಲ್ಲಿ ಗೊಂದಲ ಹಾಕುವುದು ಮತೀಯ ಆಚರಣೆ. ತಮ್ಮನ್ನು ಆಹ್ವಾನಿಸಿದವರ

ಮನೆಗಳಿಗೆ ಹೋಗಿ ಭಕ್ತರ ಕೋರಿಕೆ ಮೇರೆಗೆ ಗೊಂದಲ ಹಾಕುತ್ತಾರೆ. ನಿಗದಿಪಡಿಸಿದ ದಿನದಂದು ರಾತ್ರಿಯ ಹೊತ್ತು ಗೊಂದಲ ಹಾಕುತ್ತಾರೆ. ಗೊಂದಲಿಗರು ಸಮಾಳ, ತುಂತುಣಿ ಮತ್ತು ಕೈತಾಳಗಳ ಮೇಳದೊಂದಿಗೆ ನವರಸಯುಕ್ತವಾದ ಕಥೆ ಹೇಳುವ ಕಾಯಕದಲ್ಲಿ ಪಳಗಿದವರು. ಸಾಮಾನ್ಯವಾಗಿ ಗೊಂದಲಿಗರ ಮೇಳದಲ್ಲಿ ಮೂವರು ಕಲಾವಿದರಿರುತ್ತಾರೆ. ತಲೆಗೆ ಕವಡೆಗಳನ್ನು ಹೆಣೆದ ಮುಂಡಾಸು,



ನಿಲುವಂಗಿ, ಕಚ್ಚೆ, ಧೋತರ, ಕೊರಳಲ್ಲಿ ಮಣಿಸರಗಳನ್ನು ಧರಿಸಿ ಕೈಯಲ್ಲಿ ತಾಳ, ತುಂತುಣಿ, ಚೌಡಿಕೆಗಳನ್ನು ಹಿಡಿದು ಕಥೆ ಹೇಳುತ್ತಾರೆ. ಗೊಂದಲಿಗರ ಆಟವು ಕರ್ನಾಟಕ ಜನಪದ ರಂಗಭೂಮಿಯ ಬೀಜರೂಪವನ್ನು ಒಳಗೊಂಡಿದೆ. "ಆಟದ ನಿರೂಪಣೆಯು ಹಿಮ್ಮೇಳ ಮತ್ತು ಕಥೆಗಾರನ ಮೂಲಕವಾಗಿ ಸಾಗುತ್ತದೆ. ನಾಟಕೀಯವಾಗಿ ಕಥೆಯನ್ನು ಮುಂದುವರಿಸುತ್ತಾರೆ. ವಿಶೇಷವೆಂದರೆ ಇಬ್ಬರೇ ಎಲ್ಲ

ಪಾತ್ರಗಳನ್ನು ನಿರ್ವಹಿಸುವುದು. ಆದರೂ ಗೊಂದಲಿಗರ ಆಟದಲ್ಲಿ ಕಥೆಗಾರನೇ ಪ್ರಮುಖನಾದವನು. ಆತ ನಟ, ನಿರೂಪಕ, ಭಾಗವತ, ವಾದಕ, ನರ್ತಕ, ಸೂತ್ರಧಾರ ಎಲ್ಲವೂ ಆಗಿರುತ್ತಾನೆ." ಹಿಮ್ಮೇಳದವನು ಕೊನೆಯವರೆಗೂ ನಿಂತುಕೊಂಡೇ ಆಟದ ಪ್ರಕ್ರಿಯೆಗೆ ಗತಿ ನೀಡುತ್ತಾನೆ. ಕಥೆಗಾರನ ನಿರೂಪಣೆಯನ್ನು ಅನುಸರಿಸಿ ಆಟಕ್ಕೆ ಕಳೆ ಕಟ್ಟುತ್ತಾನೆ. ಚೌಡಿಕೆ, ಸಮಾಳಗಳು ಗೊಂದಲಿಗರಾಟದಲ್ಲಿ ಪ್ರಧಾನ ಪಾತ್ರ ವಹಿಸುತ್ತವೆ. ಕತೆಗಾರನು ವಾದ್ಯಗಳನ್ನು ನುಡಿಸುತ್ತಾ ಕುಣಿಯುವುದರೊಂದಿಗೆ ಆಟಕ್ಕೆ ಸೊಗಸು ತರುತ್ತಾನೆ. ಗೊಂದಲಿಗರು ಶೀಲಾವತಿ, ಬಸವಕುಮಾರ – ಲೋಹಿತಕುಮಾರ, ಅರಣ್ಯಕುಮಾರ, ಕುಮಾರ ರಾಮ, ಲಕ್ಷ್ಮಾಪತಿ ರಾಜ, ಬಾಳ ಭಿಕ್ಷುಕ, ಯಲ್ಲಮ್ಮ, ರೇಣುಕೆಯ ಕಥೆ ಮೊದಲಾದ ಕಥಾನಕಗಳನ್ನು ರಸವತ್ತಾಗಿ ಹಾಡುತ್ತಾರೆ ಮತ್ತು ಪ್ರದರ್ಶಿಸುತ್ತಾರೆ.

ಚೌಡಿಕೆಯವರು

ಕರ್ನಾಟಕದ ಧಾರ್ಮಿಕ ಸಂಪ್ರದಾಯಕ್ಕೆ ಸೇರಿದ ವಿಶಿಷ್ಟ ವೃತ್ತಿ ಗಾಯಕರಾದ ಚೌಡಿಕೆಯವರು ಸವದತ್ತಿ ಎಲ್ಲಮ್ಮನ ಭಕ್ತರು. ಕರ್ನಾಟಕದ ರಾಯಚೂರು, ಬೆಳಗಾವಿ, ಬಳ್ಳಾರಿ, ಧಾರವಾಡ, ತುಮಕೂರು, ಚಿತ್ರದುರ್ಗ, ಶಿವಮೊಗ್ಗ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ವ್ಯಾಪಕವಾಗಿಯೂ ಮೈಸೂರು, ಮಂಡ್ಯ, ಬೆಂಗಳೂರು, ಕೋಲಾರ ಜಿಲ್ಲೆಗಳಲ್ಲಿ ಅಪರೂಪಕ್ಕೂ ಚೌಡಿಕೆಯವರು ಕಂಡುಬರುತ್ತಾರೆ.

ಚೌಡಿಕೆ ಪ್ರಕಾರವು ಸ್ತ್ರೀ ದೇವತೆಗೆ ಸಂಬಂಧಪಟ್ಟಿದ್ದು. ಈ ಸಂಪ್ರದಾಯದಲ್ಲಿ ಹೆಂಗಸರು, ಗಂಡಸರು, ನಪುಂಸಕರೂ ಇದ್ದಾರೆ. ಇವರನ್ನು ಎಲ್ಲಮ್ಮನ ಜೋತೇರು, ಜೋಗಪ್ಪಗಳು ಎಂದು

ಕರೆಯುತ್ತಾರೆ. ಜೋಗಪ್ಪಗಳು ಬಿಳಿಯ ನಿಲುವಂಗಿ, ಮೇಲೆ ಕರಿಯ ಕೋಟು, ಬಿಳಿ ಅಥವಾ ಹಳದಿ ಬಣ್ಣದ ಕಾಸೆ ಪಂಚೆ, ಕೊರಳಿನಿಂದ ಎರಡೂ ಕಡೆ ಇಳಿಬಿಟ್ಟ ಧೋತರ, ಕಾಲಿಗೆ ಗೆಜ್ಜೆ, ಹಣೆಯಲ್ಲಿ ಎಲ್ಲಮ್ಮದೇವಿಯ ಭಂಡಾರದ ಬೊಟ್ಟು, ಕೊರಳಲ್ಲಿ ದರುಶನದ ಮಣಿ ಧರಿಸಿರುತ್ತಾರೆ. ಜೋಗತಿಯರು ಕೆಂಪು ಬಳೆ, ಹಣೆಯಲ್ಲಿ ಕುಂಕುಮ ಮತ್ತು ಭಂಡಾರ, ಕಾಲಿಗೆ ಗೆಜ್ಜೆ, ತಲೆಯ ಮೇಲೆ ಎಲ್ಲಮ್ಮನ ಮುಖವಾಡವಿರುವ ತಾಮ್ರದ ಕೊಡ ಹೊತ್ತಿರುತ್ತಾರೆ. ಈ ಕೊಡವೇ ಎಲ್ಲಮ್ಮದೇವಿಯ ಝುಗ.



ವಾದ್ಯ ಪ್ರಧಾನವಾದ ಈ ವೃತ್ತಿಗಾಯನ ಮೇಳದಲ್ಲಿ ವಿಶಿಷ್ಟವಾದ ಚೌಡಿಕೆ ವಾದ್ಯದ ಕಾರಣದಿಂದಾಗಿಯೇ ಎಲ್ಲಮ್ಮ ದೇವಿಯ ಗುಡ್ಡರನ್ನು ಚೌಡಿಕೆಯವರು ಎಂದು ಗುರುತಿಸಲಾಗುತ್ತದೆ. ಕೊಳಗದಾಕಾರದ ಮರದ ಹೊಳವು ಒಂದಕ್ಕೆ, ಒಂದು ಕಡೆ ಆಡಿನ ಚರ್ಮವನ್ನು ಬಿಗಿದು,

ಅದರೊಳಗಿನಿಂದ ಕುರಿಯ ಕರುಳಿನಿಂದ ತಯಾರಿಸಿದ ಬೀವನ್ನು ಎಳೆದು ಕಟ್ಟಿರುತ್ತಾರೆ. ಕಡ್ಡಿಯೊಂದರ ಸಹಾಯದಿಂದ ಈ ಬೀವನ್ನು ಮೀಟುವುದರ ಮುಖಾಂತರ ಉಂಟಾಗುವ ನಾದದ ಹಿನ್ನೆಲೆಯಲ್ಲಿ ಚೌಡಿಕೆಯವರು ದೇವಿಯ ಕಥೆ ಮಾಡುತ್ತಾರೆ.

ಚೌಡಿಕೆಯು ದೇವಿಯು ಸಂಪ್ರದಾಯುವಾದುದರಿಂದ ಪೂಜಾರ್ಹ ವಸ್ತು. ಹಾಡುವ ಸಂದರ್ಭಗಳಲ್ಲಿ ಮಾತ್ರ ಇದನ್ನು ನುಡಿಸುತ್ತಾರೆ. ಉಳಿದಂತೆ ದೇವಿಯ ಗದ್ದಿಗೆಯ ಮೇಲಿಟ್ಟು ಪೂಜಿಸುತ್ತಾರೆ. ಮೈಲಿಗೆಯಲ್ಲಿ ಚೌಡಿಕೆಯನ್ನು ಮುಟ್ಟುವಂತಿಲ್ಲ.

ಪರಶುರಾಮ ಕಾರ್ತವೀರ್ಯಾರ್ಜುನನನ್ನು ಕೊಂದು ಅವನ ಅಂಗಾಂಗಗಳಿಂದ ವಾದ್ಯವನ್ನು ಮಾಡಿ ತನ್ನ ತಾಯಿಯನ್ನು ಸಂತೋಷಪಡಿಸಿದನೆಂದು, ರೇಣುಕೆಯನ್ನು ವರಿಸಬೇಕೆಂಬ ಕಾರ್ತವೀರ್ಯಾರ್ಜುನನ ಗರ್ವವನ್ನು ಮುರಿಯಲೆಂದೇ ಅವಳು ಚೌಡಿಕೆಯಾಗಿ ಬಂದು ಸೊಕ್ಕು ಮುರಿದಳೆಂದು ಚೌಡಿಕೆಯ ಉಗಮದ ಬಗ್ಗೆ ಪುರಾಣ ಕಥೆಗಳು ರೂಢಿಯಲ್ಲಿವೆ.

ಚೌಡಿಕೆ ಮೇಳವು ಸಾಹಿತ್ಯ–ಸಂಗೀತ–ನೃತ್ಯ ಇವು ಮೂರೂ ಮುಪ್ಪುರಿಗೊಂಡ ಕಲೆ. ಇಬ್ಬರು ಅಥವಾ ಮೂವರು ಕಲಾವಿದರು ಒಟ್ಟಾಗಿ ಮೇಳ ನಡೆಸುತ್ತಾರೆ. ಚೌಡಿಕೆಯಲ್ಲಿ ಬಾರಿಕೆ ಚೌಡಿಕೆ ಮತ್ತು ಶ್ರುತಿ ಚೌಡಿಕೆಗಳೆಂದು ಎರಡು ಬಗೆಗಳಿದ್ದು, ಚೌಡಿಕೆ ಮೇಳದಲ್ಲಿ ಬಾರಿಕೆ ಚೌಡಿಕೆಯೇ ಮುಖ್ಯವಾದ್ಯ. ಮುಖ್ಯಗಾಯಕ ಬಾರಿಕೆ ಮೇಳದಲ್ಲಿ ಬಾರಿಕೆ ಚೌಡಿಕೆಯನ್ನು ಹಿಡಿದು ಹಾಡಿಗೆ ತಕ್ಕಂತೆ ನಾದದಲ್ಲಿ ಏರಿಳಿತ ಮಾಡಿಕೊಂಡು ವಿವಿಧ ಗತ್ತಿನಲ್ಲಿ ನುಡಿಸುತ್ತಾ ಕಥೆಯನ್ನು ನಿರೂಪಿಸುತ್ತಾನೆ. ಅವನ ಪಕ್ಕದಲ್ಲಿ ಶ್ರುತಿ ಚೌಡಿಕೆ ಹಿಡಿದವನಿದ್ದು, ಬಾರಿಕೆ ಚೌಡಿಕೆಯ ನಾದಕ್ಕೆ ಮತ್ತು ಹಾಡಿಗೆ ಹಿನ್ನೆಲೆಯಾಗಿ

ಏಕತಾನದಲ್ಲಿ ದನಿ ನೀಡುತ್ತಾ ಹೋಗುತ್ತಾನೆ. ಮೂರನೆಯವನು ಕೈಯಲ್ಲಿ ತಾಳ ಹಿಡಿದಿರುತ್ತಾನೆ. ಮುಖ್ಯ ಗಾಯಕ ಮಧ್ಯೆ ನಿಂತಿದ್ದು ಶ್ರುತಿ, ತಾಳದವರು ಅವನ ಅಕ್ಕಪಕ್ಕ ನಿಂತಿರುತ್ತಾರೆ.

ಚೌಡಿಕೆ ಮೇಳದವರು ತಮ್ಮ ಆರಾಧ್ಯದೈವದ ಪುರಾಣ ಮೂಲ ರೇಣುಕಾ, ಜನಪದ ಮೂಲದ ಎಲ್ಲಮ್ಮನ ಚರಿತ್ರೆಯನ್ನಲ್ಲದೆ ಸರ್ಜಪ್ಪನಾಯ್ಕನ ಕತೆ, ಹೊನ್ನಾದೇವಿಯ ಕತೆ, ಬಳ್ಳಾರಿ ತತ್ವ, ಅಣ್ಣ-ತಂಗಿ, ಬಂಜೆ ಹೊನ್ನಮ್ಮ, ಮಾರಮ್ಮ ಮೊದಲಾದ ಕಾವ್ಯಗಳನ್ನು ಸಹ ಹಾಡುತ್ತಾರೆ. ಚೌಡಿಕೆಯವರ ಸರಕಿನಲ್ಲಿ ಅರಳಿ ಬರುವ ಈ ಕತೆಗಳು ಬರೀ ನಿರೂಪಣೆಗಳಲ್ಲ; ಸ್ವಾರಸ್ಯವನ್ನು ಮಿಡಿಯುವ ಕುತೂಹಲವನ್ನು ಕೆರಳಿಸುವ ಸುಂದರ ಕಾವ್ಯಗಳು; 'ಎಲ್ಲಿ ಕಾಣೆಲ್ಲಿ ಕಾಣಿನೆ ಎಲ್ಲಮ್ಮನಂತಾಕಿನೆಲ್ಲಿ ಕಾಣೆ' ಎಂಬ ಹಾಡಿನೊಂದಿಗೆ ಚೌಡಿಕೆಯನ್ನು ವಿವಿಧ ಗತ್ತುಗಳಲ್ಲಿ ನುಡಿಸುತ್ತಾ ಇಡೀ ವಾತಾವರಣವನ್ನೇ ನಾದಲೋಕಕ್ಕೆ ಕೊಂಡೊಯ್ಯುವ ಶಕ್ತಿ ಈ ಕಲೆಯಲ್ಲಿ ಹುದುಗಿದೆ.

ತಂಬೂರಿಯವರು

ವಿಶೇಷವಾಗಿ ಹಾಸನ ಜಿಲ್ಲೆಯಲ್ಲಿ ಕಂಡುಬರುವ ತಂಬೂರಿಯವರು ಕರ್ನಾಟಕದ ಉತ್ಕೃಷ್ಟ ವೃತ್ತಿಗಾಯಕ ಪರಂಪರೆಗೆ ಸೇರಿದವರು. ಹರಳಯ್ಯನ ಕುಲದವರೆಂದು ಹೇಳಿಕೊಳ್ಳುವ ತಂಬೂರಿಯವರು ಅಂಗಿ, ದಟ್ಟಿ ಪಂಚೆ, ತಲೆಗೆ ಅರಿಶಿಣ ಅಥವಾ ಕಾವಿ ಬಣ್ಣದ ಪೇಟ, ಕೊರಳಿಗೆ ರುದ್ರಾಕ್ಷಿ, ಹಣೆಯಲ್ಲಿ ವಿಭೂತಿ ಧರಿಸಿ ಬಗಲಲ್ಲಿ ಜೋಳಿಗೆ ಹಾಕಿ ನೀಲಗಾರರ ತಂಬೂರಿಯನ್ನು ಹೋಲುವಂತಹ ನಾಗರ ಹೆಡೆಯ ಆಕೃತಿಯ ತಂಬೂರಿ ಮತ್ತು ಚಿಟಿಕಿಗಳನ್ನು ಹಿಡಿದು ಊರಾಡಲು ಹೊರಡುತ್ತಾರೆ. ತಂಬೂರಿಯು

ಇವರ ಹಾಡುಗಾರಿಕೆಯಲ್ಲಿ ಪ್ರಧಾನ ಪಾತ್ರ ವಹಿಸುವುದರಿಂದ ಇವರನ್ನು ತಂಬೂರಿಯವರು ಎಂದು ಕರೆಯುತ್ತಾರೆ.

ತಂಬೂರಿಯವರಲ್ಲಿ ಮುಮ್ಮೇಳ ಮತ್ತು ಹಿಮ್ಮೇಳಗಳಿವೆ. ಇವರ ಹಾಡುಗಾರಿಕೆಗೆ ಗುಮಟೆ, ತಾಳ, ತಂಬೂರಿ ಹಿನ್ನೆಲೆ ವಾದ್ಯಗಳು. ಮುಮ್ಮೇಳದ ಹಾಡುಗಾರನು ತಂಬೂರಿ ಬಾರಿಸಕೊಂಡಿ ಕಥೆ ಮಾಡುತ್ತಾನೆ. ಹಿಮ್ಮೇಳದವರು ಗುಮಚಿ, ತಾಳಗಳೊಂದಿಗೆ ಸೊಲ್ಲು ಕೊಡುತ್ತಾರೆ. ತಂಬೂರಿಯವರು ಅನೇಕ ಧಾರ್ಮಿಕ ಕಾವ್ಯಗಳು ಮತ್ತು ಲೌಕಿಕ ಕಾವ್ಯಗಳನ್ನು ಹಾಡುತ್ತಾರೆ. ಸತ್ತು ಕೆಟ್ಟೋರನ್ನು ಹೊಗಳುತ್ತಾರೆ.

ಆಧ್ಯಾತ್ಮ ವಿಚಾರಗಳು, ಜೀವನ ತತ್ವಗಳನ್ನು ಜನರ ಮನಸ್ಸಿಗೆ ಹಿಡಿಯುವಂತೆ ಹಾಡಿನಲ್ಲಿ ಪರಿಣತರು. ತಂಬೂರಿಯವರು ಕೇವಲ ತತ್ವ ಪ್ರಚಾರಕರಾಗಲಿ, ಧಾರ್ಮಿಕ ವೃತ್ತಿಗಾಯಕರಾಗಲಿ ಅಲ್ಲ; ಸಂಸ್ಕೃತಿ ಪ್ರಸಾರಕರು.

ದೊಂಬಿದಾಸರು

ಗೊರವರು, ಕಂಸಾಳೆಯವರು, ನೀಲಗಾರರು ಧಾರ್ಮಿಕ ಸಂಪ್ರದಾಯದ ವೃತ್ತಿಗಾಯಕರಾದರೆ, ದೊಂಬಿದಾಸರು ಲೌಕಿಕ ಸಂಪ್ರದಾಯಕ್ಕೆ ಸೇರಿದ ವೃತ್ತಿಗಾಯಕರು. ತುಮಕೂರು, ಮಂಡ್ಯ, ಕೋಲಾರ, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಕಂಡುಬರುವ ದೊಂಬಿದಾಸರು ಮೂಲತಃ ಆಂಧ್ರಪ್ರದೇಶದಿಂದ ವಲಸೆ ಬಂದ ಅರೆ ಅಲೆಮಾರಿಗಳು. ದೊಂಬಿದಾಸರಿಗೆ ನಿರ್ದಿಷ್ಟ ಆರಾಧ್ಯ ಧೈವ ಎಂಬುದಿಲ್ಲ. ಯಾವ ದೇವರ ಗುಡ್ಡರೂ ಅಲ್ಲ. ಕೇವಲ ಹೊಟ್ಟೆಪಾಡಿಗಾಗಿ ಮತ್ತು ಜನರನ್ನು ರಂಜಿಸುವುದಕ್ಕಾಗಿ ಹಾಡಿಕೊಂಡು ಬಂದವರು.

ದೊಂಬಿದಾಸರ ಜನಪ್ರಿಯತೆಗೆ ಮುಖ್ಯವಾದ ಕಾರಣ ಅವರ ಮಧುರವಾದ ಗಾಯನ. ಜನ ಮನಸ್ಸಿನ ನಾಡಿಯ ಮಿಡಿತವನ್ನು ಅರಿತು ಹಾಡುವಂಥ ಕಲಾತ್ಮಕಗುಣ ಇವರಲ್ಲಿರುವುದರಿಂದ ದೊಂಬಿದಾಸರ ಗಾಯನವೆಂದರೆ ಜನ ಗುಂಪುಗೂಡುತ್ತಾರೆ.

ಬಿಳಿಯ ನಿಲುವಂಗಿ, ಸೊಂಟಕ್ಕೆ ಸುತ್ತಿದ ಪಂಚೆ. ತಲೆಗೆ ಪೇಟ, ಕೊರಳಲ್ಲಿ ಮಣಿಸರ, ಬಗಲಲ್ಲಿ ಜೋಳಿಗೆ ಇವಿಷ್ಟೂ ದೊಂಬಿದಾಸರ ವೇಷಭೂಷಣಗಳು. ಮೂರು ಮೊಳ ಉದ್ದದ ಬಿದಿರಿನ ಗಳುವಿಗೆ ಸೋರೆ ಬುರುಡೆ ಜೋಡಿಸಿ, ಬುರುಡೆಯ ಮೇಲಿನಿಂದ ಗಳುವಿನ ತುದಿಯವರಿಗೆ ಹಾದು ಬಂದ ಏಕ ತಂತಿಯನ್ನು ಎಳೆದು ಬಿಗಿ ಮಾಡಲು ಶ್ರುತಿ ಬಿರಡೆ ಇರುವ ಏಕತಾರಿಯನ್ನು ಬಲಗೈಯಲ್ಲಿ ಹಿಡಿದು ಎಡಗೈಯಲ್ಲಿ ಚಿಟಿಕೆ ಹಾಕುತ್ತಾ, ಕುಳಿತು ಕೇಳುವ ಮಂದಿ ತಲೆದೂಗುವಂತೆ ಸುಶ್ರಾವ್ಯವಾಗಿ ಹಾಡುವ ದೊಂಬಿದಾಸರು ಚಾರಿತ್ರಿಕ, ಲೌಕಿಕ, ಪೌರಾಣಿಕ ಕಥೆಗಳನ್ನು ಹಾಡುತ್ತಾರೆ. ಸತ್ಯ ಭೋಜರಾಜನ ಕಥೆ, ಬಂಜೆ ಹೊನ್ನಮ್ಮ, ಬಾಲನಾಗಮ್ಮ, ಮಾಗಡಿ ಕೆಂಪೇಗೌಡ, ಕೋಣವೇಗೌಡ, ಅಣ್ಣ – ತಂಗಿ ಕಥೆಗಳು ವಿಶೇಷ.

ದೊಂಬಿದಾಸರ ವಿಶೇಷತೆ ಎಂದರೆ ಗಂಗೆ ಗೌರಿ ಜಗಳವನ್ನು ಅಭಿನಯಪೂರ್ವಕವಾಗಿ ಹಾಡುವುದು. ಊರಿನ ಜನರೇ ಕೊಟ್ಟ ಚಾಪೆ, ಹಳೆಯ ಜಮಖಾನಗಳನ್ನು ಬಳಸಿ ರಂಗಮಂಟಪ ನಿರ್ಮಾಣ ಮಾಡಿ ಕುಟುಂಬದವರೆಲ್ಲಾ ಸೇರಿಕೊಂಡು ಗಂಗೆ ಗೌರಿ ಕಥೆಯನ್ನು ಸಾಭಿನಯಪೂರ್ವಕವಾಗಿ ಪ್ರದರ್ಶಿಸುತ್ತಾರೆ.

ನೀಲಗಾರರು

ಕಂಸಾಳೆಯವರ ಧಾರ್ಮಿಕ ಸಂಪ್ರದಾಯದ ಮೂಲ ಪುರುಷ ಮಹದೇಶ್ವರನಾದರೆ, ನೀಲಗಾರರ ಸಂಪ್ರದಾಯದ ಮೂಲ ಪುರುಷ ಮಂಟೇಸ್ವಾಮಿ. ನೀಲಗಾರರು ಮಂಟೇಸ್ವಾಮಿಯ ಗುಡ್ಡರು ಅಂದರೆ ಭಕ್ತರು. ಮಂಡ್ಯ, ಮೈಸೂರು, ಚಾಮರಾಜನಗರ, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಕಂಡು ಬರುವ ನೀಲಗಾರರು ತಮ್ಮ ಆರಾಧ್ಯ



ದೈವವಾದ ಮಂಟೇಸ್ವಾಮಿಯು ನೆಲೆಸಿರುವ ಬೊಪ್ಪಗೌಡನಪುರಕ್ಕೆ ಮತ್ತು ಮಂಟೇಸ್ವಾಮಿ ಶಿಷ್ಯರಾದ ಸಿದ್ಧಪ್ಪಾಜಿ, ರಾಚಪ್ಪಾಜಿ ಇರುವ ಚಿಕ್ಕಲ್ಲೂರು, ಕಪ್ಪಡಿಗಳಿಗೆ ನಡೆದುಕೊಳ್ಳುತ್ತಾರೆ.

ಮಾದೇಶ್ವರನಂತೆಯೇ ಮಂಟೇಸ್ವಾಮಿಯು ಮಹಾನ್ ಲೀಲೆಗಾರ. ತಮ್ಮ ಆರಾಧ್ಯ ದೈವದ ಲೀಲೆಗಳನ್ನು ಹಾಡಿ

ಕೊಂಡಾಡುವವರು ಲೀಲೆಗಾರರು. ಬಹುಶಃ ನೀಲಗಾರ ಎಂಬ ಪದವು ಲೀಲೆಗಾರ ಎಂಬುದರಿಂದ ನಿಷ್ಪನ್ನಗೊಂಡಿರಬಹುದು. ನೀಲಗಾರರಲ್ಲಿ ಸಾಧಾರಣ ನೀಲಗಾರರು, ತಂಬೂರಿ ನೀಲಗಾರರು ಎಂದು ಎರಡು ವಿಧಗಳಿದ್ದು ಸಾಧಾರಣ ನೀಲಗಾರರು ಕೇವಲ ಗುಡ್ಡರು. ಇವರು ಕಥೆ – ಕಾವ್ಯಗಳನ್ನು ಹಾಡುವುದಿಲ್ಲ. ತಂಬೂರಿ ನೀಲಗಾರರು ದೇವರ ಕತೆಗಳನ್ನು ಹಾಡುತ್ತಾ ಧಾರ್ಮಿಕ ವಿಧಿಗಳಲ್ಲಿ ಪಾಲ್ಗೊಳ್ಳುತ್ತಾರೆ.

ತಲೆಗೆ ಕೆಂಪು ರುಮಾಲು, ಕರಿಯ ನಿಲುವಂಗಿ, ಕಚ್ಚೆ ಪಂಚೆ, ಮೇಲೊಂದು ಕರಿಯ ಕೋಟು, ಕೈಯಲ್ಲಿ ಕೋಲು, ಬಗಲಲ್ಲಿ ಜೋಳಿಗೆ ನೀಲಗಾರರ ವೇಷಭೂಷಣಗಳು. ತಂಬೂರಿ ನೀಲಗಾರರ ವಾದ್ಯವಿಶೇಷ. ಇದರ ಜೊತೆಗೆ ತಾಳ, ಗಗ್ಗರ, ಢಕ್ಕೆಗಳನ್ನು ಬಳಸುತ್ತಾರೆ. ವಂಶಪಾರಂಪರ್ಯವಾಗಿ ಇಲ್ಲವೆ ಗುರುಮುಖೇನ ನೀಲಗಾರ ದೀಕ್ಷೆ ಪಡೆದು ಮಂಟೇಸ್ವಾಮಿಯ ಗುಡ್ಡರಾಗಿ ಊರಿಂದೂರಿಗೆ ಸಂಚರಿಸುತ್ತ ಮಂಟೇಸ್ವಾಮಿಯ ಸೇವೆ ಮಾಡುತ್ತಾರೆ. ಸಾಮಾನ್ಯವಾಗಿ ಮೂವರು ಇಲ್ಲವೆ ಗುಂಪಿನಲ್ಲಿ ಊರಾಡಲು ಹೋಗುತ್ತಾರೆ.

ತಮ್ಮನ್ನು ಮಂಟೇದಯ್ಯ, ಮಂಟೇದವರು ಎಂದು ಕರೆದುಕೊಳ್ಳುವ ನೀಲಗಾರರು ಕರ್ನಾಟಕದ ಅತ್ಯಂತ ಉತ್ಕೃಷ್ಟ ಧಾರ್ಮಿಕ ವೃತ್ತಿಗಾಯಕ ಪರಂಪರೆಗೆ ಸೇರಿದವರು. ನೀಲಗಾರರು ಬಳಸುವ ತಂಬೂರಿಯು ವಿಶಿಷ್ಟವಾದುದು. ಸುಮಾರು ಎರಡು ಮೊಳ ಉದ್ದವಿರುವ ತಂಬೂರಿಯನ್ನು ಹಲಸಿನ ಮರದಿಂದ ತಯಾರಿಸಿದ್ದು, ಮೇಲು ತುದಿಯಲ್ಲಿ ನಾಗರ ಹೆಡೆ ಇಲ್ಲವೆ ಸಿಂಹದ ಮುಖ ಬಿಡಿಸಿರುತ್ತಾರೆ. ಚಕ್ರಾಕಾರದ ಗಗ್ಗರಗಳನ್ನು ಎಡಗೈ ಹೆಬ್ಬೆರಳಿಗೆ ಸಿಕ್ಕಿಸಿಕೊಂಡು ತಂಬೂರಿಯ ಮೇಲೆ ಬಡಿಯುತ್ತ ಬಲಗೈಯಿಂದ

ತಂತಿಯನ್ನು ಮೀಟುತ್ತಾ ಹಾಡುತ್ತಾರೆ. ತಾಳ ಮತ್ತು ಢಕ್ಕೆಗಳು ಹಿಮ್ಮೇಳದ ವಾದ್ಯಗಳು. ನೀಲಗಾರ ಮೇಳದಲ್ಲಿ ಮುಮ್ಮೇಳ ಮತ್ತು ಹಿಮ್ಮೇಳಗಳಿರುತ್ತವೆ.

ಉತ್ತರ ದೇಶದಿಂದ ದಕ್ಷಿಣಕ್ಕೆ ಬಂದು ಮಳವಳ್ಳಿ ತಾಲ್ಲೂಕಿನ ಬೊಪ್ಪಗೌಡನಪುರದಲ್ಲಿ ಮಠವನ್ನು ಸ್ಥಾಪಿಸಿ ಸೊಕ್ಕಿದವರನ್ನು ಮುರಿದು ಒಗ್ಗಿದವರನ್ನು ಶಿಷ್ಯರನ್ನಾಗಿ ಸ್ವೀಕರಿಸಿದ ಮಂಟೇಸ್ವಾಮಿಯ ಕತೆಯನ್ನು ನಾಲ್ಕು ಸಾಲುಗಳಲ್ಲಿ ಹಾಡುತ್ತಾರೆ. ರಾಚಪ್ಪಾಜಿ ಸಾಲು, ಸಿದ್ದಪ್ಪಾಜಿ ಸಾಲು, ಚಿಕ್ಕಲ್ಲೂರು ಸಾಲು, ಧರೆಗೆ ದೊಡ್ಡವರ ಸಾಲುಗಳೆಂದು ನಾಲ್ಕು ಸಾಲುಗಳಲ್ಲಿ ತಾಳಿನಿಂದ ತುದಿಯವರೆಗೂ ಕಥೆ ಮಾಡುತ್ತಾರೆ. ತಮ್ಮ ಆರಾಧ್ಯ ದೈವವನ್ನು ಕುರಿತ ಧಾರ್ಮಿಕ ಕಾವ್ಯವನ್ನಷ್ಟೇ ಅಲ್ಲದೆ, ಅರ್ಜುನಜೋಗಿ ಹಾಡು, ಪಿರಿಯಾಪಟ್ಟಣದ ಕಾಳಗ, ಲಿಂಗರಾಜಮ್ಮ, ಚನ್ನಿಗರಾಯ, ಬಾಲನಾಗಮ್ಮ, ಅಕ್ಕನಾಗಮ್ಮ, ಭುವನಮ್ಮ, ಚನ್ನಬಸವಣ್ಣ, ಮೈದುನರಾಮಣ್ಣ ಮುಂತಾದ ಲೌಕಿಕ ಕಾವ್ಯಗಳನ್ನು ಸಹ ಹಾಡುತ್ತಾರೆ.

ಬುರ್ರಕಥಾ

ಕರ್ನಾಟಕ-ಆಂಧ್ರದ ಗಡಿ ಪ್ರದೇಶವಾದ ಕೋಲಾರ, ರಾಯಚೂರು, ಬಳ್ಳಾರಿ ಜಿಲ್ಲೆಗಳಲ್ಲಿ ಕಾಣಬರುವ ಬುರ್ರಕಥಾ ವಿಶಿಷ್ಟವಾದ ವೃತ್ತಿಗಾಯಕ ಸಂಪ್ರದಾಯ. ಬುರ್ರ ಎಂದರೆ ತೆಲುಗಿನಲ್ಲಿ ಬುರುಡೆ ಎಂದರ್ಥ. ಆಕೃತಿಯಲ್ಲಿ ದುಂಡಾಗಿದ್ದು, ಒಳಗೆ ಟೊಳ್ಳಾಗಿರುವ ವಸ್ತುವನ್ನು ಬುರುಡೆ ಎಂದು ಕರೆಯುತ್ತಾರೆ. ಈ ಮೇಳದಲ್ಲಿ ಬಳಸುವ ವಾದ್ಯಗಳಾದ ತಂಬೂರಿ ಮತ್ತು ಗುಮಟೆಗಳು ಬರ್ರ ಎನ್ನುವ ಪದಕ್ಕೆ ಹೊಂದಿಕೊಳ್ಳುತ್ತವೆ.

ಬುರ್ರಕಥಾ ಮೇಳದಲ್ಲಿ ಮೂವರು ಕಲಾವಿದರಿರುತ್ತಾರೆ. ಮುಮ್ಮೇಳದಲ್ಲಿ ಮುಖ್ಯ ಕಥೆಗಾರ ಮತ್ತು ಹಿಮ್ಮೇಳದಲ್ಲಿ ಸಹ

ಕಲಾವಿದರಿಬ್ಬರು. ಮುಖ್ಯ ಕಥೆಗಾರನದು ಭರ್ಜರಿ ವೇಷಭೂಷಣಗಳಾದರೆ ಹಿಮ್ಮೇಳದವರದು ಸಾದಾ ಉಡುಗೆ. ತಲೆಗೆ ಜರಿ ಇರುವ ರುಮಾಲು ಪೇಟ, ನಿಲುವಂಗಿ, ಕರಿಯ ಕೋಟು, ಹೆಗಲಿನಿಂದ ಇಳಿಬಿದ್ದ ಜರಿಯ ಶಲ್ಯ, ಬಿಳಿಯ ಕಚ್ಚೆ ಪಂಚೆ. ಕಾಲಲ್ಲಿ ಗೆಜ್ಜೆ, ಎಡಗೈಯ ಹೆಬ್ಬೆರಳು-ತೋರು ಬೆರಳುಗಳಿಗೆ ಗಗ್ಗರ, ಬಲಗೈಯಲ್ಲಿ ತಂಬೂರಿ ಹಿಡಿದ ಮುಖ್ಯ ಕಥೆಗಾರ ಹಾಡಿಕೊಂಡು



ಕುಣಿಯುತ್ತಿದ್ದರೆ ಹಿಮ್ಮೇಳದವರು ಗುಮಟೆಗಳನ್ನು ಬಾರಿಸುತ್ತಾ ಮುಮ್ಮೇಳದ ಕಥೆಗಾರನಿಗೆ ಸ್ಫೂರ್ತಿ ನೀಡುತ್ತಿರುತ್ತಾರೆ.

ಬುರ್ರಕಥೆಯ ಯಶಸ್ಸು ಮುಮ್ಮೇಳದ ಕಥೆಗಾರನನ್ನು ಅವಲಂಭಿಸಿರುತ್ತದೆ.ಇಲ್ಲಿ ಕಥೆಗಿಂತಲೂ ಹೆಚ್ಚಾಗಿ ನಿರೂಪಣೆ ಸನ್ನಿವೇಶಕ್ಕೆ ತಕ್ಕಂತೆ ಹಾವಭಾವಗಳು, ಧ್ವನಿಯ ಏರಿಳಿತಗಳು ಪ್ರೇಕ್ಷಕರ ಮೇಲೆ ಹೆಚ್ಚಾಗಿ ಪರಿಣಾಮ ಬೀರುತ್ತವೆ.

ಬುರ್ರಕಥಾ ಮೇಳದವರು ಒಂದೆಡೆ ನೆಲೆ ನಿಂತು, ಹೊಟ್ಟೆಪಾಡಿಗಾಗಿ ಊರಿಂದೂರಿಗೆ ಸಂಚರಿಸುತ್ತಾ ಬೇಕಷ್ಟು ದಿನಸಿ ಸಂಗ್ರಹಣೆ, ಹಣ ಸಂಪಾದನೆ ಮಾಡಿಕೊಂಡು ಮತ್ತೆ ಮರಳಿ ತಮ್ಮ ನೆಲೆಗೇ ಹಿಂದಿರುಗುತ್ತಾರೆ. ಬುರ್ರ ಕಥೆಗೆ ನಿರ್ದಿಷ್ಟ ವೇದಿಕೆ ಬೇಕಾಗಿಲ್ಲ. ಊರ ಪಂಚಾಯಿತಿ ಕಟ್ಟೆ, ದೇವಸ್ಥಾನದ ಆವರಣ, ಮನೆಗಳ ಜಗಲಿಯೇ ಸಾಕು. ಹಬ್ಬ ಹರಿದಿನಗಳು-ಜಾತ್ರೆ ಉತ್ಸವಗಳಲ್ಲಿ ಈ ಮೇಳದ ಪ್ರದರ್ಶನ ನಡೆಯುತ್ತದೆ. ಬುರ್ರ ಕಥೆಯವರು ಮುಗ್ಗುರು ಮರಾಟಿಲು, ಕಾಂಬೋಜರಾಜ, ಪೆದ್ದ ಬೊಟ್ಟಲ ರಾಜ, ಕಾಮಮ್ಮ, ಕಾಟಮರಾಜ, ಪರ್ಯಾಯ ಪಾಪಡು, ದೇಸಿಂಗ ರಾಜ, ಬಲ್ಲಾಳ ರಾಜ, ಬಾಲ ನಾಗಮ್ಮ, ಕುಮಾರ ರಾಮ ಇತ್ಯಾದಿ ಕಥೆಗಳನ್ನು ಹಾಡುತ್ತಾರೆ. ಕಥೆಗಳನ್ನು ಮಾಡುವಾಗ ರಂಜನೆಗಾಗಿ ಹಾಸ್ಯಭರಿತ ಉಪಕಥೆಗಳನ್ನು ಹಾಡುತ್ತಾರೆ. ಬುರ್ರಕಥಾ ಮೇಳದಲ್ಲಿ ಸ್ತ್ರೀಯರೂ ಕಥೆ ಮಾಡುವುದುಂಟು.

ಹೆಳವರು

ಗ್ರಾಮೀಣ ಪ್ರದೇಶಗಳಲ್ಲಿ 'ಹೆಳವರ ಮಲ್ಲರು' ಎಂದೇ ಹೆಸರಾಗಿರುವ ಹೆಳವರು ಕರ್ನಾಟಕದ ಲೌಕಿಕ ವೃತ್ತಿಗಾಯಕ ಪರಂಪರೆಗೆ ಸೇರಿದವರು. ಚಾಪೆ ಹೆಳವರು, ಗಂಟೆ ಹೆಳವರು ಎಂದು ಎರಡು ಬಗೆಗಳಿವೆ. ಗಂಟೆ ಹೆಳವರು, ಎತ್ತಿನ ಹೆಳವರು ಎಂದೂ ಕರೆಯುತ್ತಾರೆ. ಚಾಪೆ ಹೆಳವರ ವೃತ್ತಿ ಚಾಪೆ ಹೆಣೆಯುವುದಾಗಿದ್ದರೆ, ಗಂಟೆ ಹೆಳವರಿಗೆ ರೈತಾಪಿ ಜನರಂತೆ ಮನೆಮಠಗಳಿದ್ದು ಊರಲ್ಲಿ ವಾಸಿಸುತ್ತ ತಮ್ಮಲ್ಲಿಯೇ ಇಂತಿಷ್ಟು ಹಳ್ಳಿಗಳೆಂದು ಹಂಚಿಕೊಂಡು ತಮ್ಮ ಒಕ್ಕಲು ಮನೆತನಗಳ ವಂಶಾವಳಿಯನ್ನು ಹಾಡಿ ಹೊಗಳಿಕೊಂಡು ಜೀವನ ಮಾಡುತ್ತಾರೆ. ತಮ್ಮ ಸುಪರ್ದಿಗೆ ಸೇರಿದ ಒಕ್ಕಲುಗಳಿಗೆ

ಸಂಬಂಧಪಟ್ಟ ವಂಶಾವಳಿ ಕಡತಗಳನ್ನು ಸಂರಕ್ಷಿಸಿಕೊಂಡು ಬಂದು ಆ ವಿವರಗಳನ್ನೆಲ್ಲಾ ಹಾಡಿನ ರೂಪಕ್ಕೆ ಅಳವಡಿಸಿಕೊಂಡು ಹಾಡುತ್ತಾರೆ. ಇವರಲ್ಲಿ ಗ್ರಾಮ ಸಂಬಂಧಿಯಾದ ಸರ್ವ ವಿವರಗಳೂ ಲಭ್ಯ ಇರುತ್ತವೆ. ಈ ವೃತ್ತಿ ಗಂಟೆ ಹೆಳವರಿಗೆ ವಂಶ ಪಾರಂಪರ್ಯವಾಗಿ ಬಂದದ್ದು.

ಹೆಳವರಲ್ಲಿ ವಿಶಿಷ್ಟ ವೇಷಭೂಷಣಗಳಿಲ್ಲ. ಸಾಮಾನ್ಯವಾದ ಉಡುಪು. ಪಂಚೆ, ಅಂಗಿ, ತಲೆಗೊಂದು ರುಮಾಲು. ಇವರಲ್ಲಿ ದೀಕ್ಷೆ ಕೊಡುವ ಪದ್ಧತಿಗಳಿಲ್ಲ. ಕಥೆ ಮಾಡುವಾಗ ಯಾವುದೇ ದೇವರನ್ನು ಪೂಜಿಸುವುದಿಲ್ಲ. ಗಂಟೆ ಹೆಳವರಿಗೆ ಅವರು ಹಿಡಿಯುವ ಗಂಟೆಯ ಕಾರಣದಿಂದಾಗಿಯೇ ಆ ಹೆಸರು ಬಂದಿದ್ದು, ಹೆಳವರ ಗಂಟೆ ದೊಡ್ಡ ತೆಂಗಿನಕಾಯಿ ಗಾತ್ರದ ಲೋಹದ ಸಾಧನ. ಗಂಟೆಯ ಹಿಡಿಗೆ ನಾಲ್ಕು ಬೆರಳು ಅಗಲಕ್ಕೆ ಮಂದವಾಗಿ ಬಟ್ಟೆಯನ್ನು ಜೋಡಿಸಿ ಅರ್ಧ ಅಡಿ ಉದ್ದಕ್ಕೆ ಅದನ್ನು ಹೊಲಿದು ಕವಡೆಗಳನ್ನು ಪೋಣಿಸಿರುತ್ತಾರೆ. ಗಂಟೆ ಬಾರಿಸುವಾಗ ಎಡಗೈಯಲ್ಲಿ ಈ ಬುಟ್ಟಿಯನ್ನು ಹಿಡಿದು, ಬಲಗೈಯಲ್ಲಿ ಗಂಟೆಯ ನಾಲಿಗೆಯನ್ನು ತಾಳಕ್ಕನುಗುಣವಾಗಿ ಬಾರಿಸುತ್ತ ಹಾಡುತ್ತಾರೆ. ಗಂಟೆ ಹೆಳವರಿಗೆ ಗಂಟೆಯು ವಂಶ ಪಾರಂಪರ್ಯವಾಗಿ ಬಂದಿದ್ದು, ಗಂಟೆ ವಿನಾ ಮತ್ತಾವ ವಾದ್ಯವನ್ನು ಬಳಸುವುದಿಲ್ಲ. ಇಬ್ಬರು ಅಥವಾ ಮೂವರು ಜೊತೆಯಲ್ಲಿ ಕುಳಿತು ಸುದೀರ್ಘ ಕಾವ್ಯಗಳನ್ನು ಹಾಡುವಾಗ ತಾಳಕ್ಕನುಗುಣವಾಗಿ ಏಕಕಾಲದಲ್ಲಿ ಗಂಟೆಯನ್ನು ಬಾರಿಸುತ್ತಾ ಹೋಗುತ್ತಾರೆ. ಕೈ ಬೆರಳುಗಳಿಂದ ಗಂಟೆಯ ನಾಲಗೆ ಹಿಡಿದು ನಾದವನ್ನುಂಟು ಮಾಡುವುದರಿಂದ ತಾಳ ತಪ್ಪದಂತೆ ನುಡಿಸಲು ಸಾಧ್ಯ.

ಹೆಳವರು ವಂಶಾವಳಿಗಳನ್ನು ಹೊಗಳುವಾಗ ಆಯಾ ವಂಶದವರ ಮನೆ ದೇವರು, ಇತರೆ ದೇವರುಗಳು, ವಂಶದ ಮೂಲ,

ಮೂಲಪುರುಷ ಇತ್ಯಾದಿ ವಿಷಯಗಳನ್ನು ಅಳವಡಿಸಿಕೊಂಡು ಹೊಗಳುತ್ತಾರೆ. ಹಾಡಿನ ರೂಪ ಒಂದೇ ಅಗಿರುತ್ತದಾದರೂ ಪ್ರತಿಯೊಂದು ವಂಶಕ್ಕೆ ಅಯಾ ವಂಶದ ದೇವತೆಗಳ, ಪಿತೃಗಳ, ವಂಶದ ಹೆಸರುಗಳನ್ನು ಮಾತ್ರ ಹಾಡುತ್ತಾರೆ. ಒಕ್ಕಲುಗಳ ವಂಶಾವಳಿಯ ಹೊಗಳಿಕೆಯಷ್ಟೇ ಅಲ್ಲದೆ, ಚಾಮುಂಡಿ ಪುರಾಣ, ಮಾಗಡಿ ಕೆಂಪೇಗೌಡ, ಚುಂಚನಗಿರಿ ಭೈರವ, ಯಮನಾಳು ದೇವಮ್ಮ, ಮಾದೇಶ್ವರ ಮೊದಲಾದ ಕಥನ ಕಾವ್ಯಗಳನ್ನು ಹಾಡುತ್ತಾರೆ.

ಹೆಳವರು ಅಲೆಮಾರಿಗಳಲ್ಲ. ನಿರ್ದಿಷ್ಟ ಕಡೆಗಳಲ್ಲಿ ವಾಸಿಸುತ್ತಿದ್ದು ಗೊತ್ತಾದ ಊರುಗಳಲ್ಲಿ ಮಾತ್ರ ಸಂಚರಿಸುತ್ತಾರೆ. ಜೋಳಿಗೆ, ಕೋಲು, ಗಂಟೆಗಳೊಂದಿಗೆ ಎತ್ತಿನ ಮೇಲೆ ಕುಳಿತು ತಮ್ಮ ಒಕ್ಕಲು ಮನೆಗಳಿಗೆ ಭೇಟಿ ನೀಡಿ ಅವರ ವಂಶದ ಗತ ವೈಭವವನ್ನು ಹಾಡಿ ಹೊಗಳಿ, ಅವರು ಕೊಡುವ ಕಾಳುಕಡ್ಡಿಗಳನ್ನು ಪಡೆಯುತ್ತಾರೆ.

ಗಂಟೆ ಹೆಳವರು ಮೂಲವ್ಯಾಧಿಗೆ ಚಿಕಿತ್ಸೆ ಮಾಡುವುದುಂಟು. ಸಂಖ್ಯೆಯಲ್ಲಿ ಕಡಿಮೆ ಇದ್ದರೂ ವಿಶಿಷ್ಟ ಸಂಪ್ರದಾಯದ ದೃಷ್ಟಿಯಿಂದ ಮಹತ್ವ ಪಡೆದಿರುವ ಹೆಳವರು ಮತ್ತು ಅವರ ಕಾವ್ಯಗಳನ್ನು ಎಚ್. ಎಲ್. ನಾಗೇಗೌಡರು ಸಂಗ್ರಹಿಸಿ ಪ್ರಕಟಿಸಿದ್ದಾರೆ.



ಜನಪದ ಕಲೆ

ಕರ್ನಾಟಕದಲ್ಲಿ ಅಧಿಕ ಸಂಖ್ಯೆಯ ಜನಪದ ಕಲಾವಿದರಿದ್ದಾರೆ. ಇವರಲ್ಲಿ ಸ್ತ್ರೀ ಪುರುಷರಿಬ್ಬರೂ ಪ್ರಮುಖ ಪಾತ್ರ ವಹಿಸಿರುವುದು ವಿಶೇಷ. ಗಾಯನ, ನರ್ತನ, ವಾದ್ಯವಾದನ, ವೇಷಭೂಷಣ, ಪ್ರದರ್ಶನ ಮೊದಲಾದವುಗಳಲ್ಲಿ ಒಬ್ಬರಿಗಿಂತ ಒಬ್ಬರು ಮೇಲಾಗಿರುವುದನ್ನು ಕಾಣಬಹುದು. ಈ ಅಭಿಜಾತ ಕಲಾವಿದರು ತಲೆ ತಲಾಂತರದಿಂದ ಉಳಿಸಿಕೊಂಡು ಬಂದಿರುವ ಕಲೆಗಳು ಅಪಾರವಾಗಿವೆ, ವೈವಿಧ್ಯಮಯವಾಗಿವೆ. ಕರ್ನಾಟಕದಲ್ಲಿ ಪ್ರಚಾರದಲ್ಲಿರುವ, ಪ್ರಸಿದ್ಧವಾಗಿರುವ ಕೆಲವು ವೃತ್ತಿಗಾಯನ ಕಲೆಗಳನ್ನು ಸಚಿತ್ರವಾಗಿ ಈ ಗ್ರಂಥದಲ್ಲಿ ಪರಿಚಯಿಸಿದೆ.

ಜನಪದ ಸಾಹಿತ್ಯ ಸಂಗ್ರಹ, ವಿಶ್ಲೇಷಣೆ, ವ್ಯಾಖ್ಯಾನದಲ್ಲಿ ಸೋಪಜ್ಞೆಯನ್ನು ಉಳಿಸಿಕೊಂಡಿರುವ ಪ್ರಸಿದ್ಧ ಜಾನಪದ ವಿದ್ವಾಂಸರಾದ ಡಾ॥ ಚಕ್ಕೆರೆ ಶಿವಶಂಕರ್ ಪ್ರಸ್ತುತ ಪುಸ್ತಕವನ್ನು ಸಿದ್ಧಪಡಿಸಿದ್ದಾರೆ. ಇದರಲ್ಲಿ ಜನಪದ ವೃತ್ತಿ ಗಾಯಕರ ಬಗ್ಗೆ ಮಾಹಿತಿಯಿದೆ.

ಪ್ರೊ. ಡಿ. ಲಿಂಗಯ್ಯ

ಕರ್ನಾಟಕ ಜಾನಪದ ಪರಿಷತ್ತು

ಜಾನಪದ ಸಿರಿಭುವನ

ನಂ.1, ಜಲದರ್ಶಿನಿ ಬಡಾವಣೆ, ಎಂ. ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ,
ಹೊಸ ಬಿ ಇ ಎಲ್ ರಸ್ತೆ, ಬೆಂಗಳೂರು-5600054 ದೂರವಾಣಿ: 080-23605033
janapadaparishath@hotmail.com